

ಭಾರತದ ಸಂವಿಧಾನ

ಪೀಠಿಕೆ

ಭಾರತದ ಪ್ರಜೆಗಳಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# ಬೆಂಗಳೂರು ಕೇಂದ್ರ ನಗರ ಪಾಲಿಕೆ

## Bengaluru Central City Corporation

## ಆಯವ್ಯಯ ಭಾಷಣ

## BUDGET SPEECH

## 2026-27

ಮಂಡನೆ:

**Presented by:**

ಶ್ರೀ.ರಾಜೇಂದ್ರ ಚೋಳನ್.ಪಿ ಭಾ.ಆ.ಸೇ

**Sri.Rajendra Chollan.P I.A.S**

**ಆಯುಕ್ತರು, ಬೆಂಗಳೂರು ಕೇಂದ್ರ ನಗರ ಪಾಲಿಕೆ**

**Commissioner Bengaluru Central City Corporation**

**ವಾಚನ : ಶ್ರೀಮತಿ ವಿಜಯಲಕ್ಷ್ಮೀ.ಕೆ.ಟಿ, KSAS**

**Reader : Smt. Vijayalakshmi. K.T, KSAS**

**ಉಪ ನಿಯಂತ್ರಕರು (ಹಣಕಾಸು)**

**Deputy Controller(Finance)**

**ದಿನಾಂಕ/Date : 27-03-2026**

# ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯವ್ಯಯ 2026-27

ಬೆಂಗಳೂರು ಕೇಂದ್ರ ನವ ನಿರ್ಮಾಣ -ಸದೃಢ ಮೂಲಸೌಕರ್ಯ, ಸುರಕ್ಷಿತ ರಸ್ತೆ, ಸ್ವಚ್ಛ ಮತ್ತು ನಾಗರಿಕ ಕೇಂದ್ರೀಕೃತ ಅಭಿವೃದ್ಧಿ.

**ಗೌರವಾನ್ವಿತ ಉಪ ಮುಖ್ಯಮಂತ್ರಿಗಳು, ಸಚಿವರು, ಸಂಸತ್ ಸದಸ್ಯರು, ಶಾಸಕರು ಹಾಗೂ ಬೆಂಗಳೂರಿನ ಪ್ರಜ್ಞಾವಂತ ನಾಗರಿಕರೇ,**

**ಶ್ರೀ ರಾಜೇಂದ್ರ ಚೋಳನ್, ಪಿ. ಆಯುಕ್ತರು,** ಬೆಂಗಳೂರು ಕೇಂದ್ರ ನಗರ ಪಾಲಿಕೆ ಆದ ನಾನು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಚೊಚ್ಚಲ ಆಯವ್ಯಯ ಭಾಷಣವನ್ನು ಮಂಡಿಸುತ್ತಿದ್ದೇನೆ. ಇದೊಂದು ಐತಿಹಾಸಿಕ ಮಹತ್ವದ ಕ್ಷಣವಾಗಿದ್ದು, **ಬೆಂಗಳೂರು ಕೇಂದ್ರ ನವ ನಿರ್ಮಾಣ** ಎಂಬ ಹೆಸರಿನಲ್ಲಿ ಅತ್ಯಂತ ಜವಾಬ್ದಾರಿಯುತವಾದ ಆಯವ್ಯಯವನ್ನು ನಿಮ್ಮ ಮುಂದೆ ಪ್ರಸ್ತುತಪಡಿಸುವ ಭಾಗ್ಯ ನನ್ನದಾಗಿರುವುದಕ್ಕೆ ಹೆಮ್ಮೆಯೆನಿಸುತ್ತಿದೆ.

ಈ ಬಜೆಟ್ ಅನ್ನು ಸಿದ್ಧಪಡಿಸಲು ಮಾರ್ಗದರ್ಶನ ನೀಡಿದ ಕರ್ನಾಟಕದ ಗೌರವಾನ್ವಿತ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಸಿದ್ದರಾಮಯ್ಯ ರವರಿಗೆ ಮತ್ತು ರಾಜ್ಯದ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಶ್ರೀ.ಡಿ. ಕೆ. ಶಿವಕುಮಾರ್ ರವರಿಗೆ, ಸಲಹೆ, ಸೂಚನೆ ನೀಡಿರುವ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ.ತುಷಾರ್ ಗಿರಿನಾಥ್ ರವರಿಗೆ, ಪಾಲಿಕೆಯ ಮಾನ್ಯ ಆಡಳಿತಗಾರರಾದ ಶ್ರೀ. ಮಹೇಶ್ವರ್ ರಾವ್.ಎಂ ರವರಿಗೆ ಮತ್ತು ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ಆದ ಶ್ರೀ ಡಾ. ಹರೀಶ್ ಕುಮಾರ್ ಕೆ. ಹಾಗೂ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಪರ ಆಯುಕ್ತರು (ಅಭಿವೃದ್ಧಿ) ಆದ ಶ್ರೀ ದಲ್ಜಿತ್ ಕುಮಾರ್ ಅವರಿಗೆ ಈ ಸಂದರ್ಭದಲ್ಲಿ ಅವರ

ನಿರಂತರ ಸಹಕಾರ ಮತ್ತು ಮಾರ್ಗದರ್ಶನಕ್ಕಾಗಿ ನಾನು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಆಯವ್ಯಯ ತಯಾರಿಕೆಯಲ್ಲಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ ಎಲ್ಲಾ ಗೌರವಾನ್ವಿತ ಸಚಿವರು, ಶಾಸಕರು, ಜನಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಸರ್ಕಾರೇತರ ಸಂಸ್ಥೆಗಳು, ನಾಗರೀಕರು ಮತ್ತು ನಾಗರಿಕ ವೇದಿಕೆಗಳು, ಸಂಘ ಸಂಸ್ಥೆಗಳು ಹಾಗೂ ಮಾಧ್ಯಮ ಮಿತ್ರರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಕಾರ್ಯದಲ್ಲಿ ನನ್ನೊಂದಿಗೆ ಕರ್ತವ್ಯ ನಿರ್ವಹಿಸಿದ ಪಾಲಿಕೆಯ ಆಯವ್ಯಯ ತಂಡದ ಶ್ರಮವನ್ನು ವಿಶೇಷವಾಗಿ ಸ್ಮರಿಸುತ್ತಾ, ನಗರವನ್ನು ಸ್ವಚ್ಛವಾಗಿಡಲು ಹಗಲಿರುಳು ಶ್ರಮಿಸುತ್ತಿರುವ ನಮ್ಮ ಪೌರಕಾರ್ಮಿಕರ ದಣಿವರಿಯದ ಸೇವೆಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸ ಬಯಸುತ್ತೇನೆ. ಎಲ್ಲಕ್ಕಿಂತ ಮಿಗಿಲಾಗಿ, ಈ ನಗರದ ಅಭಿವೃದ್ಧಿಯ ನಿಜವಾದ ಪಾಲುದಾರರಾದ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಪ್ರಜ್ಞಾವಂತ ನಾಗರಿಕರಿಗೆ ಹೃತ್ಪೂರ್ವಕವಾದ ಧನ್ಯವಾದಗಳು.

ಮಹಾನ್ ದಾರ್ಶನಿಕ ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗದಲ್ಲಿ ಹೇಳುವಂತೆ: **"ಹಳೆಯ ಗಂಧದ ಕೊರಡು ಹೊಸದಾಗಿ ಸವೆಯಲದು... ಹಳೆಯ ಮತಿ ಹೊಸ ನೀತಿ ಹೊಸ ಯುಗಕೆ ಹೊಸ ಕೃತಿ."** ಗಂಧದ ಕೊರಡಿನಂತಹ ನಮ್ಮ ಬೆಂಗಳೂರು ಕೇಂದ್ರದ ಭವ್ಯ ಪರಂಪರೆಯನ್ನು ಉಳಿಸಿಕೊಂಡು, ಅದಕ್ಕೆ ಆಧುನಿಕ ತಂತ್ರಜ್ಞಾನ ಮತ್ತು ಹೊಸ ನೀತಿಗಳ ಸುಗಂಧ ನೀಡುವ ಉದ್ದೇಶವೇ ಈ **"ಬೆಂಗಳೂರು ಕೇಂದ್ರ ನವ ನಿರ್ಮಾಣ"** ನಾಗರಿಕ ಕೇಂದ್ರೀಕೃತ ಹಾಗೂ ಸದೃಢ ಮೂಲಸೌಕರ್ಯವುಳ್ಳ ಸುರಕ್ಷಿತ ನಗರವನ್ನು ನಿರ್ಮಿಸುವುದೇ ಈ ಆಯವ್ಯಯದ ಮೂಲ ಮಂತ್ರವಾಗಿದೆ.

ನಾಡಪ್ರಭು ಕೆಂಪೇಗೌಡರಿಂದ 1537ರಲ್ಲಿ ಸ್ಥಾಪಿತವಾದ ಬೆಂಗಳೂರು, ಇಂದು 'ಭಾರತದ ಸಿಲಿಕಾನ್ ಸಿಟಿ'ಯಾಗಿ ಜಾಗತಿಕ ಮನ್ನಣೆ ಪಡೆದಿದೆ. 1862ರ ಪುರಸಭೆಯಿಂದ ಆರಂಭವಾದ ಇಲ್ಲಿನ ಆಡಳಿತ ವ್ಯವಸ್ಥೆಯು, 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಆಗಿ ವಿಸ್ತಾರಗೊಂಡಿತು. ಪ್ರಸ್ತುತ, ನಗರದ ವೇಗದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಅನ್ವಯ ಬೆಂಗಳೂರು ಮಹಾನಗರ ಪ್ರದೇಶದ ಆಡಳಿತದಲ್ಲಿ ಮಹತ್ವದ ಸುಧಾರಣೆ ತರಲು ಸೆಪ್ಟೆಂಬರ್ 2, 2025 ರಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸಿ 5 ನಗರ ಪಾಲಿಕೆಗಳನ್ನಾಗಿ ಸೃಜಿಸಲಾಗಿದೆ. ಇದರ ಭಾಗವಾಗಿ ಬೆಂಗಳೂರನ್ನು ಐದು ಪ್ರತ್ಯೇಕ ನಗರ ಪಾಲಿಕೆಗಳಾಗಿ ರಚಿಸಲಾಗಿದ್ದು, 'ಬೆಂಗಳೂರು ಕೇಂದ್ರ ನಗರ ಪಾಲಿಕೆ' (BCCC) ಅವುಗಳಲ್ಲಿ ಅತ್ಯಂತ ವಿಶಿಷ್ಟವಾದುದಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯು 16ನೇ ಶತಮಾನದ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ಸುಮಾರು 78 ಚದರ ಕಿಲೋಮೀಟರ್ ವಿಸ್ತೀರ್ಣ ಹಾಗೂ 22 ಲಕ್ಷ ಜನಸಂಖ್ಯೆಯನ್ನು ಒಳಗೊಂಡಿದೆ. ಆರು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 63 ವಾರ್ಡ್‌ಗಳಾಗಿ ವಿಂಗಡಣೆಯಾಗಿರುವ ಈ ಪಾಲಿಕೆಯು ಕೇವಲ ಆಡಳಿತಾತ್ಮಕ ಘಟಕವಲ್ಲದೆ, ಇಡೀ ನಗರದ ಹೃದಯ ಬಿಂದುವಾಗಿದೆ. ಪರಂಪರೆ, ಕಲೆ, ಸಂಸ್ಕೃತಿ ಹಾಗೂ ಆಧುನಿಕ ಆಡಳಿತದ ಅಪರೂಪದ ಸಮ್ಮಿಲನವಾಗಿರುವ ಈ ಪ್ರದೇಶವು ಕರ್ನಾಟಕದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯ ದಿಕ್ಸೂಚಿಯಾಗಿದೆ. ಕೇಂದ್ರ ವಾಣಿಜ್ಯ ವಲಯವನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಈ ಪಾಲಿಕೆಯು ಭವಿಷ್ಯದ ಸುಸ್ಥಿರ ಮತ್ತು ಆಧುನಿಕ ಅಭಿವೃದ್ಧಿಯ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಐತಿಹಾಸಿಕ ಗೌರವಕ್ಕೆ ಚ್ಯುತಿ ಬಾರದಂತೆ ಪ್ರಸ್ತುತ ಆಯವ್ಯಯವನ್ನು ರೂಪಿಸಿದೆ.

ಪಾಲಿಕೆಯ ವ್ಯಾಪ್ತಿಗೆ ಬರುವ ಆರು ವಿಧಾನಸಭಾ ಕ್ಷೇತ್ರಗಳು ನಗರದ ಬಹುಮುಖಿ ಅಸ್ಮಿತೆ ಹಾಗೂ ವಾಣಿಜ್ಯ ಶ್ರೀಮಂತಿಕೆಯನ್ನು ಸಮಗ್ರವಾಗಿ ಬಿಂಬಿಸುತ್ತವೆ. ರಾಜ್ಯದ ಶಕ್ತಿಕೇಂದ್ರಗಳಾದ ವಿಧಾನಸೌಧ, ಉಚ್ಚ ನ್ಯಾಯಾಲಯ, ಕೇಂದ್ರ ವಿಶ್ವವಿದ್ಯಾನಿಲಯ, ರಸೆಲ್ ಮಾರುಕಟ್ಟೆ ಹಾಗೂ ಹಲಸೂರು ಕೆರೆಯನ್ನು ಒಳಗೊಂಡ ಶಿವಾಜಿನಗರ, ಅಂತರರಾಷ್ಟ್ರೀಯ ಮಟ್ಟದ ಚಿನ್ನಸ್ವಾಮಿ ಕ್ರೀಡಾಂಗಣವಿರುವ ಶಾಂತಿನಗರ ಮತ್ತು ಡಿಆರ್‌ಡಿಒ, ಎನ್‌ಎಎಲ್, ಬಿಇಎಂಎಲ್ ನಂತಹ ವೈಜ್ಞಾನಿಕ ಸಂಸ್ಥೆಗಳ ತವರೂರಾದ ಸಿ.ವಿ. ರಾಮನ್ ನಗರ ಪಾಲಿಕೆಯ ಪ್ರಮುಖ ಭಾಗಗಳಾಗಿವೆ. ಇದರೊಂದಿಗೆ, ಪಾರಂಪರಿಕ ಕೋಟೆ, ಸಾಹಿತ್ಯ ಪರಿಷತ್ತು ಹಾಗೂ ಏಷ್ಯಾದ ಅತಿದೊಡ್ಡ ಕೃಷ್ಣರಾಜೇಂದ್ರ ಪುಷ್ಪ ಮಾರುಕಟ್ಟೆ ಹೊಂದಿರುವ ಚಾಮರಾಜಪೇಟೆ, ಸಾರಿಗೆ ಸಂಪರ್ಕದ ಹೆಬ್ಬಾಗಿಲಾದ ಕೆಂಪೇಗೌಡ ಬಸ್ ನಿಲ್ದಾಣ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ, ಸ್ವಾತಂತ್ರ್ಯ ಉದ್ಯಾನವನ ಹಾಗೂ ಚಿತ್ರೋದ್ಯಮದ ಕೇಂದ್ರವಾಗಿರುವ ಗಾಂಧಿನಗರ ಮತ್ತು ವಿಶ್ವವಿಖ್ಯಾತ ಕರಗ ಉತ್ಸವ ಹಾಗೂ ಶತಮಾನಗಳ ರೇಷ್ಮೆ ವ್ಯಾಪಾರಕ್ಕೆ ಪ್ರಸಿದ್ಧಿಯಾದ ಚಿಕ್ಕಪೇಟೆ ಕ್ಷೇತ್ರಗಳು ಪಾಲಿಕೆಯ ಗೌರವವನ್ನು ಎತ್ತಿಹಿಡಿಯುತ್ತವೆ.

ನಮ್ಮ ಆಡಳಿತದ ದಿಕ್ಸೂಚಿಯನ್ನು ನಿರ್ಧರಿಸುವಾಗ ಮಹಾನ್ ದಾರ್ಶನಿಕ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗದ ಸಾಲುಗಳು ಅತ್ಯಂತ ಪ್ರಸ್ತುತವೆನಿಸುತ್ತವೆ.

**“ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,**
**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ,**
**ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ,**
**ಎಲ್ಲರೊಳಗೊಂದಾಗು ಮಂಕುತಿಮ್ಮ”**

ಈ ಅಮರ ಸಾಲುಗಳು ನಮ್ಮ ಆಡಳಿತದ ಮೂಲ ಮಂತ್ರವಾಗಬೇಕಿದೆ. ನಗರದ ಅತ್ಯಂತ ಕಟ್ಟಕಡೆಯ ವ್ಯಕ್ತಿಯ ಸಂಕಷ್ಟಕ್ಕೆ ನಾವು ಬೆಟ್ಟದಂತೆ ಆಸರೆಯಾಗಬೇಕಿದೆ ಮತ್ತು ಅವರ ಪ್ರತಿ ಮನೆಗೆ ಸುಖದ ಮಲ್ಲಿಗೆಯ ಪರಿಮಳವನ್ನು ತಲುಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ಕಷ್ಟದ ಕಾಲದಲ್ಲಿ ಕಲ್ಲಂತೆ ಧೈರ್ಯದಿಂದ ನಿಂತು, ಸಮಾಜದ ದೀನದುರ್ಬಲರ ಪಾಲಿಗೆ ಬೆಲ್ಲದಂತೆ ಸಿಹಿಯಾದ ಸಾಂತ್ವನ ನೀಡುವುದು ನಮ್ಮ ಪರಮ ಕರ್ತವ್ಯವಾಗಿದೆ. ನಮ್ಮ ಆಯವ್ಯಯವು ಕೇವಲ ಆರ್ಥಿಕ ಲೆಕ್ಕಾಚಾರವಾಗದೆ, ಮಾನವೀಯ ಮೌಲ್ಯಗಳ ಪ್ರತಿಬಿಂಬವಾಗಬೇಕು ಎನ್ನುವುದೇ ನಮ್ಮ ಪ್ರಮುಖ ಗುರಿಯಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಈ ಬಾರಿಯ ಆಯವ್ಯಯವು ಕೇವಲ ಅಂಕಿ-ಅಂಶಗಳ ಪಟ್ಟಿಯಲ್ಲ, ಇದು ನವ ಬೆಂಗಳೂರಿನ ನಿರ್ಮಾಣಕ್ಕಾಗಿ ನಾವು ಸಿದ್ಧಪಡಿಸಿರುವ ಸಮಗ್ರ ನೀಲನಕ್ಷೆ. ನಮ್ಮ ನಗರದ ಭವಿಷ್ಯವನ್ನು ಉಜ್ವಲಗೊಳಿಸುವ ಸಲುವಾಗಿ ನಾವು ಘೋಷಿಸಿರುವ ಯೋಜನೆಗಳನ್ನು ನಿಮ್ಮ ಮುಂದೆ ಮಂಡಿಸ ಬಯಸುತ್ತೇನೆ.

## ಆಯವ್ಯಯದ ಪಕ್ಷಿನೋಟ

ನಮ್ಮ ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಿಸಿದಾಗ, 2026-27 ನೇ ಸಾಲಿನಲ್ಲಿ ರೂ. 64.60 ಲಕ್ಷಗಳ ಪ್ರಾರಂಭಿಕ ಶಿಲ್ಕು ಲಭ್ಯವಿದ್ದು, ಪಾಲಿಕೆಯ ಸ್ವಂತ ಸಂಪನ್ಮೂಲಗಳ ಮೂಲಕ **ರೂ. 2342.20** ಕೋಟಿಗಳಷ್ಟು ಆದಾಯವನ್ನು ಕ್ರೋಢೀಕರಿಸಲು ಗುರಿ ಹೊಂದಲಾಗಿದೆ. ನಗರದ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅತ್ಯಂತ ಪೂರಕವಾಗಿ ಸ್ಪಂದಿಸಿದ್ದು, **ರೂ. 884.50** ಕೋಟಿಗಳಷ್ಟು ಬೃಹತ್ ಅನುದಾನವನ್ನು ಒದಗಿಸಿವೆ ಹಾಗೂ ಮುನಿಸಿಪಲ್ ಬಾಂಡ್ ವಿತರಣೆ ಮೂಲಕ **ರೂ.200.00** ಕೋಟಿಗಳನ್ನು ಸಂಗ್ರಹಿಸಲು ಯೋಜಿಸಲಾಗಿದ್ದು, ಈ ಎಲ್ಲಾ ಮೂಲಗಳಿಂದ ಒಟ್ಟಾರೆ

ಸ್ವೀಕೃತಿಯು **ರೂ. 3427.34** ಕೋಟಿಗಳಿಗೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಮೊತ್ತವನ್ನು ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ವೆಚ್ಚ ಮಾಡಲು ನಿರ್ಧರಿಸಲಾಗಿದ್ದು, ಒಟ್ಟು **ರೂ. 3426.60** ಕೋಟಿಗಳ ಅಂದಾಜು ವೆಚ್ಚದ ನಂತರವೂ ರೂ. 78.65 ಲಕ್ಷಗಳ ಮಿಗತೆ ಆಯವ್ಯಯವನ್ನು ನಾವು ನಗರದ ಜನರ ಮುಂದೆ ಅತ್ಯಂತ ಹೆಮ್ಮೆಯಿಂದ ಪ್ರಸ್ತುತಪಡಿಸುತ್ತಿದ್ದೇವೆ.

**ಕಂದಾಯ: ಬೆಂಗಳೂರು ಕೇಂದ್ರ ನವ ನಿರ್ಮಾಣಕ್ಕೆ ಮೂಲಾಧಾರ**

1. ಕರ್ನಾಟಕದ ಆರ್ಥಿಕ ಶಕ್ತಿಕೇಂದ್ರ ಹಾಗೂ ಜಾಗತಿಕ ನವೀನತೆಗಳ ತವರಾಗಿರುವ ಬೆಂಗಳೂರಿನಲ್ಲಿ ಮೂಲಸೌಕರ್ಯ, ಸಾರ್ವಜನಿಕ ಸೇವೆ ಮತ್ತು ನಗರಾಭಿವೃದ್ಧಿಗೆ ಪೂರಕವಾಗಿ ನಾಗರೀಕ ಕೇಂದ್ರೀಕೃತ ಪಾಲಿಕೆ ನಿರ್ಮಿಸುವ ಹಾಗೂ ಆದಾಯ ವೃದ್ಧಿಸುವ ಜವಾಬ್ದಾರಿ ನಮ್ಮ ಮೇಲಿದೆ. ಈ ನಿಟ್ಟಿನಲ್ಲಿ 2025-26ನೇ ಸಾಲಿನಲ್ಲಿ ಪಾಲಿಕೆಯು 900 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಿಸಿ ಗಮನಾರ್ಹ ಸಾಧನೆ ಮಾಡಿದೆ. ಆಸ್ತಿ ತೆರಿಗೆ, ಜಾಹೀರಾತು, ವ್ಯಾಪಾರ ಪರವಾನಗಿ, ಘನತ್ಯಾಜ್ಯ ನಿರ್ವಹಣೆ ಮತ್ತು ಪಾರ್ಕಿಂಗ್ ಶುಲ್ಕಗಳು ನಮ್ಮ ಆದಾಯದ ಪ್ರಮುಖ ಮೂಲಗಳಾಗಿದ್ದು, ವಿಶೇಷವಾಗಿ ಡಿಜಿಟಲ್ ಮೇಲ್ವಿಚಾರಣೆ ಹಾಗೂ ಜಿಪಿಎಸ್ ಆಧಾರಿತ ಆಸ್ತಿ ತೆರಿಗೆ ಪರಿಷ್ಕರಣೆಗೆ ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಆಸ್ತಿ ತೆರಿಗೆ ಸಂಗ್ರಹಣೆಯಲ್ಲಿ ನಿರಂತರ ಏರಿಕೆ ಕಂಡುಬಂದಿದೆ.

2. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆರ್ಥಿಕ ಶಕ್ತಿಯನ್ನು ವಿಶ್ಲೇಷಿಸುವಾಗ ಕೌಟಿಲ್ಯನ ಮಾತುಗಳು ನೆನಪಿಗೆ ಬರುತ್ತವೆ.

**ಕೋಶವೇ ಆಡಳಿತದ ಮೂಲಾಧಾರ** ಎಂಬುದನ್ನು ಅರಿತಿರುವ ನಮ್ಮ ಪಾಲಿಕೆಯು ನಮ್ಮ ಸ್ವಂತ ಆದಾಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, 2026-27ನೇ ಸಾಲಿನಲ್ಲಿ ಸುಮಾರು ರೂ.1150 ಕೋಟಿ ರೂಪಾಯಿಗಳ ಅತ್ಯಂತ ಸದೃಢವಾದ ಆದಾಯ ಕ್ರೋಢೀಕರಣದ ಗುರಿಯನ್ನು ಹೊಂದಿದೆ.

3. ಪಾಲಿಕೆ ವ್ಯಾಪ್ತಿಯ ಆಸ್ತಿಗಳಿಗೆ ಆನ್‌ಲೈನ್ ಮುಖಾಂತರ E-PID ಸಂಖ್ಯೆಯನ್ನು ಸೃಜಿಸಿ **ಇ-ಖಾತಾ** ಪಡೆಯಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿದ್ದು, ಸಾರ್ವಜನಿಕರು ಕಚೇರಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲದೆ ಪಾರದರ್ಶಕ, ಸಮಯಬದ್ಧ ಹಾಗೂ ಸುಲಭ ಸೇವೆಗಳನ್ನು ಪಡೆಯಲು ಸಾಧ್ಯವಾಗಿದೆ. ಈವರೆಗೆ **84,629** ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, **84,173** ಅಂತಿಮ ಇ-ಖಾತಾಗಳನ್ನು ವಿತರಿಸಲಾಗಿದೆ.

4. **ಹೊಸ ಖಾತಾ** ವ್ಯವಸ್ಥೆ ಹಾಗೂ ಬಹು-ಘಟಕ / ಬಹುಮಹಡಿ ಕಟ್ಟಡಗಳ ಖಾತಾಗಳ ಬಲ್ಕ್ ಅನುಮೋದನೆ ಜಾರಿಗೊಳಿಸುವ ಮೂಲಕ ಅಪಾರ್ಟ್‌ಮೆಂಟ್‌ಗಳು ಮತ್ತು ದೊಡ್ಡ ಅಭಿವೃದ್ಧಿ ಯೋಜನೆಗಳನ್ನು ತೆರಿಗೆ ವಲಯಕ್ಕೆ ಸೇರಿಸಲಾಗಿದೆ. ಹೊಸ ಖಾತೆಗಳನ್ನು ನೀಡಲು ಮುದ್ರಾಂಕ ಶುಲ್ಕದ ಮೇಲೆ ಶೇ.2% ರಷ್ಟು ತೆರಿಗೆ ವಸೂಲಿ ಮಾಡಲು ನಿರ್ಧರಿಸಲಾಗಿದ್ದು, ಇದರಿಂದ ಪಾಲಿಕೆಯ ಅದಾಯದಲ್ಲಿ ಹೆಚ್ಚಳವಾಗಲಿದೆ.

5. ವ್ಯವಸ್ಥಿತ ಡಿಜಿಟಲೀಕರಣ ಮತ್ತು ಪರಿಶೀಲನೆಯ ಮೂಲಕ ಅರ್ಹ ಆಸ್ತಿಗಳ ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆ ಸಾಧ್ಯವಾಗಿದೆ. ಇದಕ್ಕಾಗಿ ಮಾರ್ಗದರ್ಶಕ ಮೌಲ್ಯದ ಮೇಲೆ 5% ವಿಧಿಸಲಾಗುತ್ತಿದ್ದು, ಪಾಲಿಕೆಯ ಆದಾಯ ಹೆಚ್ಚಿಸಲು ಸಹಕಾರಿಯಾಗಿದೆ.

6. ಸ್ವಯಂ ಘೋಷಿತ ಆಸ್ತಿತೆರಿಗೆ ಪದ್ಧತಿಯಡಿಯಲ್ಲಿ ತಪ್ಪಾಗಿ ಆಸ್ತಿ ತೆರಿಗೆ ಘೋಷಿಸಿರುವ ಪ್ರಕರಣಗಳನ್ನು ಪತ್ತೆ ಹಚ್ಚಿ ಸದರಿ ತೆರಿಗೆಗಳನ್ನು ಪರಿಷ್ಕರಿಸಿ ಪಾಲಿಕೆ ಆದಾಯ ವೃದ್ಧಿಸಲು ನಿರ್ಧರಿಸಲಾಗಿದೆ. ಒಂದು ವರ್ಷಕ್ಕಿಂತ ಹೆಚ್ಚಿನ ತೆರಿಗೆ ಸುಸ್ತಿದಾರರಾಗಿರುವ ಪ್ರಕರಣಗಳನ್ನು ಪತ್ತೆ ಹಚ್ಚಿ, ವಸೂಲಿ ಮಾಡಲು ಕ್ರಮವಹಿಸಲಾಗಿದೆ. ನೋಟಿಸ್ ಬಳಿಕವೂ ತೆರಿಗೆ ಪಾವತಿಸದಿದ್ದಲ್ಲಿ, ಬೀಗ ಮುದ್ರೆ ಜಡಿದು ಹರಾಜು ಪ್ರಕ್ರಿಯೆ ನಡೆಸಿ, ಪ್ರತಿಯೊಬ್ಬರನ್ನೂ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿ ಆದಾಯ ವೃದ್ಧಿಸಲು ಕ್ರಮಕೈಗೊಳ್ಳಲಾಗಿದೆ.

7. ಪಾಲಿಕೆಯ ಕಂದಾಯಾಧಿಕಾರಿ ಕಚೇರಿಗಳಲ್ಲಿ ಕಿಯೋಸ್ಕ್ ಸೇವಾ ಕೇಂದ್ರಗಳನ್ನು ತೆರೆದು, ನಾಗರೀಕರೇ ಸ್ವಯಂ ಆಸ್ತಿ ತೆರಿಗೆ ಪಾವತಿಸಲು ಮತ್ತು ಇತರೆ ಸೌಲಭ್ಯಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗುವುದು.

8. ತೆರಿಗೆಯೇತರ ಆದಾಯವನ್ನು ವೃದ್ಧಿಸಲು **ನೂತನ ಪಾರ್ಕಿಂಗ್ ಪಾಲಿಸಿ** ರಚಿಸಲಾಗುವುದು ಹಾಗೂ ಹೊರಾಂಗಣ ಜಾಹೀರಾತುಗಳ ವೈಜ್ಞಾನಿಕ ನಿರ್ವಹಣೆ ಮತ್ತು ಸಾರ್ವಜನಿಕ-

ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಪಾಲಿಕೆ ಆಸ್ತಿಗಳ ವಾಣಿಜ್ಯ ಬಳಕೆಗೆ ಒತ್ತು ನೀಡಲಾಗುವುದು.

**ಆಸ್ತಿಗಳು:**

9. ಸದೃಢ ಮೂಲಸೌಕರ್ಯವಿಲ್ಲದೆ ಸಮೃದ್ಧ ನಗರವಿಲ್ಲ. ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 438 ಆಸ್ತಿಗಳಿದ್ದು, ಇವುಗಳಿಂದ ಬಾಡಿಗೆ ರೂಪದಲ್ಲಿ ರೂ.58 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಇವುಗಳಲ್ಲಿ 220 ಆಸ್ತಿಗಳನ್ನು ಗುತ್ತಿಗೆ ಆಧಾರದ ಮೇಲೆ ಭೋಗ್ಯಕ್ಕೆ ನೀಡಲಾಗಿದೆ. ಗುತ್ತಿಗೆ ಷರತ್ತನ್ನು ಉಲ್ಲಂಘಿಸಿರುವ ಆಸ್ತಿಗಳನ್ನು ಗುರುತಿಸಿ ಪಾಲಿಕೆ ವಶಕ್ಕೆ ಪಡೆಯಲು ಕ್ರಮವಹಿಸುವ ಗುರಿ ಹೊಂದಿದೆ.

10. ಪಾಲಿಕೆಯ ಆದಾಯವನ್ನು ಹೆಚ್ಚಿಸಲು **ಆಸ್ತಿ ಮೌಲ್ಯೀಕರಣ (Asset Monetisation)** ಮೂಲಕ, ಖಾಲಿ ಇರುವ ಪಾಲಿಕೆ ಕಟ್ಟಡಗಳು, ಮಳಿಗೆಗಳು ಮತ್ತು ಕಚೇರಿಗಳನ್ನು ಖಾಸಗಿ ಸಂಸ್ಥೆಗಳಿಗೆ ಲೀಸ್ ನೀಡುವ ಮೂಲಕ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲಾಗುವುದು. ಬಳಕೆಯಾಗದ ಪಾಲಿಕೆ ಕಟ್ಟಡಗಳನ್ನು ವ್ಯಾಪಾರಿ ಮಳಿಗೆಗಳಾಗಿ ಅಥವಾ ಕಚೇರಿಗಳಾಗಿ ಪರಿವರ್ತಿಸಿ 5 ರಿಂದ 30 ವರ್ಷಗಳ ದೀರ್ಘಾವಧಿಯ ಗುತ್ತಿಗೆಗೆ ನೀಡುವ ಮೂಲಕ ಸ್ಥಿರ ಆದಾಯವನ್ನು ಗಳಿಸುವುದು ಇದರ ಗುರಿಯಾಗಿದೆ.

11. ಆಸ್ತಿ ವಹಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ ಆಸ್ತಿ ತೆರಿಗೆಯನ್ನು ಪೂರ್ಣಪ್ರಮಾಣದಲ್ಲಿ ವಸೂಲಿಸಿ ಆದಾಯ ವೃದ್ಧಿಸಲು ಹಾಗೂ ಆಸ್ತಿಗಳಿಗೆ ಬೇಲಿ ಅಳವಡಿಸುವ ಮೂಲಕ ಆಸ್ತಿಗಳ ಸಂರಕ್ಷಣೆಗೆ ಕ್ರಮಕೈಗೊಳ್ಳಲಾಗಿದೆ.

**ಮಾರುಕಟ್ಟೆ:**

12. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಮಾರುಕಟ್ಟೆ ವಿಭಾಗದ ವ್ಯಾಪ್ತಿಯಲ್ಲಿ 112 ಮಾರುಕಟ್ಟೆಗಳಿದ್ದು, 4772 ಮಳಿಗೆಗಳಿಂದ ಬಾಡಿಗೆ ರೂಪದಲ್ಲಿ ರೂ.25 ಕೋಟಿಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಕೆಲವೊಂದು ಮಾರುಕಟ್ಟೆಗಳು ಶಿಥಿಲಾವಸ್ಥೆಗೊಂಡಿದ್ದು, ಮರು ಅಭಿವೃದ್ಧಿಪಡಿಸುವ ಬೃಹತ್ ಅಭಿಯಾನ ಆರಂಭಿಸಲಾಗುವುದು. ಸ್ಥಳೀಯ ಸೊಗಡನ್ನು ಉಳಿಸಿಕೊಂಡು ಆಧುನಿಕ ಸೌಲಭ್ಯಗಳನ್ನು ಕಲ್ಪಿಸಿ, ಬೆಂಗಳೂರಿನ ಕೇಂದ್ರ ವಿಭಾಗದಲ್ಲಿರುವ ಕೆ.ಆರ್ .ಮಾರುಕಟ್ಟೆ, ರಸೆಲ್ ಮಾರುಕಟ್ಟೆ, ಜಾನ್‌ಸನ್ ಮಾರುಕಟ್ಟೆ, ಕಲಾಸಿ ಪಾಳ್ಯ ಮಾರುಕಟ್ಟೆ ಯಂತಹ ಐತಿಹಾಸಿಕ ಪ್ರದೇಶಗಳ ಪುನಶ್ಚೇತನ ಗೊಳಿಸಲಾಗುವುದು.

13. ನಗರದ ಆರ್ಥಿಕ ವ್ಯವಸ್ಥೆಯ ಕೇಂದ್ರಗಳಾದ ಮಾರುಕಟ್ಟೆಗಳ ಅಭಿವೃದ್ಧಿಗಾಗಿ ರೂ.90 ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಶಿವಾಜಿನಗರದ ಶತಮಾನದ ಇತಿಹಾಸವಿರುವ ರಸೆಲ್ ಮಾರುಕಟ್ಟೆಯ ಸಮಗ್ರ ಪುನರ್ ಅಭಿವೃದ್ಧಿಗೆ 70 ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು. ಇಲ್ಲಿ ಸುಸಜ್ಜಿತ ವಾಹನ ನಿಲುಗಡೆ ಮತ್ತು ಪಾರಂಪರಿಕ ಕಟ್ಟಡ ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ, ಹಾಗೂ ಇತರೆ ಮಾರುಕಟ್ಟೆ ಪ್ರದೇಶಗಳನ್ನು ರೂ.20 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಗುರಿ ಹೊಂದಲಾಗಿದೆ.

**ಆಡಳಿತ:**

14. ಪಾರದರ್ಶಕ, ಪ್ರಾಮಾಣಿಕ, ದಕ್ಷ ಮತ್ತು ಜನಸ್ನೇಹಿ ಆಡಳಿತವು ಸುಸ್ಥಿರ ನಗರಾಭಿವೃದ್ಧಿಯ ಪ್ರಮುಖ ಅಡಿಪಾಯವಾಗಿದೆ.

ಪಾಲಿಕೆಯಲ್ಲಿ ಪ್ರಸ್ತುತ 1164 ಅಧಿಕಾರಿ ಮತ್ತು ಸಿಬ್ಬಂದಿಗಳು, 2621 ಖಾಯಂ ಪೌರಕಾರ್ಮಿಕರು, ನೇರಪಾವತಿ ಅಡಿಯಲ್ಲಿ 843 ಪೌರಕಾರ್ಮಿಕರು ಹಾಗೂ ಹೊರಗುತ್ತಿಗೆ ಆಧಾರದಲ್ಲಿ 410 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ಚುರುಕುಗೊಳಿಸಲು ಅವಶ್ಯಕತೆಗೆ ಅನುಗುಣವಾಗಿ ಹೊರ ಸಂಪನ್ಮೂಲ ನೌಕರರನ್ನು ನಿಯೋಜಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

15. ಪಾಲಿಕೆಯ ಆದಾಯ ವೃದ್ಧಿಸಲು ಆಸ್ತಿ ತೆರಿಗೆಯನ್ನು ಸಮರ್ಪಕವಾಗಿ ಪರಿಷ್ಕರಿಸುವ ನಿಟ್ಟಿನಲ್ಲಿ ಟೋಟಲ್ ಸ್ಟೇಷನ್ ಸರ್ವೆ ಹಾಗೂ ಜಿಪಿಎಸ್ ಸರ್ವೆ ಕುರಿತು ಕಂದಾಯ ವಿಭಾಗದ ಸಿಬ್ಬಂದಿಗೆ ತರಬೇತಿ ನೀಡಲಾಗುವುದು. ತಾಂತ್ರಿಕ ಅಧಿಕಾರಿಗಳ ಕೌಶಲ್ಯಾಭಿವೃದ್ಧಿಗೆ ನೂತನ ತಂತ್ರಜ್ಞಾನಗಳ ಬಗ್ಗೆ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗುವುದು. ಇದರ ಜೊತೆಗೆ, ಅಧಿಕಾರಿಗಳ ಕಾರ್ಯದಕ್ಷತೆ ಹೆಚ್ಚಿಸಲು ಜಿಬಿಜಿ ಕಾಯ್ದೆ 2024, ಕೆಎಂಸಿ ಕಾಯ್ದೆ 1976, ಕೆಸಿಎಸ್ಆರ್ 1966, ಮಾಹಿತಿ ಹಕ್ಕು ಕಾಯ್ದೆ ಮತ್ತು ಸರ್ಕಾರಿ ಕಚೇರಿ ಕೈಪಿಡಿಯಂತಹ ಪ್ರಮುಖ ನಿಯಮಾವಳಿಗಳ ಕುರಿತು ಹೈಬ್ರಿಡ್ ಮಾದರಿಯಲ್ಲಿ ತರಬೇತಿ ಆಯೋಜಿಸಲಾಗುವುದು.

16. ಆಡಳಿತದಲ್ಲಿ ಪಾರದರ್ಶಕತೆ ತರಲು ಹಾಗೂ ಕಚೇರಿ ಕಾರ್ಯಗಳನ್ನು ತ್ವರಿತವಾಗಿ ಮತ್ತು ಸಂಪೂರ್ಣ ಕಾಗದರಹಿತವಾಗಿ ನಿರ್ವಹಿಸುವ ಉದ್ದೇಶದಿಂದ ಇ-ಆಫೀಸ್ ವ್ಯವಸ್ಥೆ ಮತ್ತು ಡಿಜಿಟಲೀಕರಣವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು.

**ಸಾರ್ವಜನಿಕ ಸಂಪರ್ಕ:**

17. ಪಾಲಿಕೆ ಸೇವೆಗಳ ಬಗ್ಗೆ ನಾಗರಿಕರಿಗೆ ನಿರಂತರವಾಗಿ ಜಾಗೃತಿ ಮೂಡಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಪಾಲಿಕೆಯ ಅಧಿಕೃತ ಜಾಲತಾಣ ಅಭಿವೃದ್ಧಿ ಹಾಗೂ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಜೊತೆಗೆ ಪಾಲಿಕೆಯ ಅಧಿಕೃತ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ.

18. 2026-27ನೇ ಸಾಲಿನಲ್ಲಿ ಇ - ಮಾಹಿತಿ ಪ್ರಸರಣ ವ್ಯವಸ್ಥೆಯನ್ನು ಮತ್ತಷ್ಟು ಆಧುನೀಕರಿಸಲು ಪಾಲಿಕೆಯು ಸಜ್ಜಾಗಿದೆ. ಡಿಜಿಟಲ್ ಸೌಲಭ್ಯಗಳನ್ನು ಬಳಸಿಕೊಂಡು, ನಾಗರೀಕರಿಗೆ ಯೋಜನೆಗಳ ಪ್ರಯೋಜನ ಮತ್ತು ಮಾಹಿತಿಯು ತಲುಪುವಂತೆ ಮಾಡಲಾಗುವುದು. ಈ ಮಹತ್ವಾಕಾಂಕ್ಷಿ ಸಂವಹನ ಯೋಜನೆಯು ನಗರದ ಪ್ರಗತಿಯಲ್ಲಿ ಸಾರ್ವಜನಿಕರ ಸಕ್ರಿಯ ಸಹಭಾಗಿತ್ವವನ್ನು ಹೆಚ್ಚಿಸಲಿದೆ.

19. ಸಾರ್ವಜನಿಕರಿಂದ ಬರುವ ದೂರುಗಳನ್ನು ದಾಖಲಿಸಲು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ರವಾನಿಸಲು ಕಂಟ್ರೋಲ್ ರೂಮ್ 24/7 ಕಾರ್ಯ ನಿರ್ವಹಿಸುತ್ತಿದೆ. ಹಾಗೂ ಇದರ ಜೊತೆಗೆ ಸಾರ್ವಜನಿಕರೊಂದಿಗೆ ನೇರ ಸಂಪರ್ಕಕ್ಕಾಗಿ ಫೋನ್ ಇನ್ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗುತ್ತಿದೆ.

**ಜಾಹೀರಾತು:**

20. ನಗರದ ಸೌಂದರ್ಯಕ್ಕೆ ಧಕ್ಕೆಯಾಗದಂತೆ ಹೊರಾಂಗಣ ಜಾಹೀರಾತುಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಿ ಪಾಲಿಕೆಯ ಆದಾಯ ಹೆಚ್ಚಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. ಪ್ರಸ್ತುತ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಿರುವ ಪಾದಚಾರಿ ಮೇಲುಸೇತುವೆಗಳು, ಸಾರ್ವಜನಿಕ ಶೌಚಾಲಯಗಳು, ಅಂಡರ್ ಪಾಸ್ ಹಾಗೂ ಬಸ್ ತಂಗುದಾಣಗಳಿಂದ ವಾರ್ಷಿಕ ನೆಲಬಾಡಿಗೆ ಮತ್ತು ಜಾಹೀರಾತು ಶುಲ್ಕವನ್ನು ಕಟ್ಟುನಿಟ್ಟಾಗಿ ವಿಧಿಸಲಾಗುತ್ತಿದೆ. ಜಾಹೀರಾತು ಏಜೆನ್ಸಿಗಳಿಗೆ ಅನುಮತಿ ಮತ್ತು ನವೀಕರಣ ಶುಲ್ಕದಿಂದ ರೂ.50.00 ಕೋಟಿ ಆದಾಯ ಅಂದಾಜಿಸಲಾಗಿದೆ.

21. 13 ಜನವರಿ 2026 ರಂದು ಜಾರಿಗೆ ಬಂದಿರುವ ಗ್ರೇಟರ್ ಬೆಂಗಳೂರು ಪ್ರದೇಶ ಹೊಸ ಜಾಹೀರಾತು ನಿಯಮ 2025ರನ್ವಯ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಎಲ್ ಇ ಡಿ ಮತ್ತು ಡಿಜಿಟಲ್ ಪರದೆಗಳ ಜಾಹಿರಾತಿಗೆ ಅಧೀಕೃತವಾಗಿ ಜಾಹಿರಾತು ಹಕ್ಕುಗಳನ್ನು ನೀಡಲು ಟೆಂಡರ್ ಆಹ್ವಾನಿಸಿದೆ. ಇದರ ಮೂಲಕ ರೂ.142.00 ಕೋಟಿ ನಿರೀಕ್ಷಿಸಲಾಗಿದ್ದು, ಒಟ್ಟಾರೆಯಾಗಿ 2026-27ನೇ ಆರ್ಥಿಕ ಸಾಲಿನಲ್ಲಿ ಜಾಹೀರಾತು ವಿಭಾಗದಿಂದ ರೂ.192.00 ಕೋಟಿ ಬೃಹತ್ ಆದಾಯವನ್ನು ಪಾಲಿಕೆಯ ಬೊಕ್ಕಸಕ್ಕೆ ಸೇರಿಸುವ ಗುರಿ ಹೊಂದಲಾಗಿದೆ.

**ಭೂಸ್ವಾಧೀನ:**

22. ನಗರದ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯ ಕಾಮಗಾರಿಗಳ ಸುಗಮ ಅನುಷ್ಠಾನಕ್ಕೆ ಅಗತ್ಯವಿರುವ ಭೂಮಿಯನ್ನು ವಶಪಡಿಸಿಕೊಳ್ಳುವುದು ಮತ್ತು ಭೂಮಿ ಕಳೆದುಕೊಂಡ ಮಾಲೀಕರಿಗೆ ಕಾನೂನುಬದ್ಧವಾಗಿ ಆರ್ಥಿಕ ಪರಿಹಾರ ಅಥವಾ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ (ಡಿಆರ್‌ಸಿ/ಟಿಡಿಆರ್) ವಿತರಿಸಲಾಗುವುದು. ಈ ಹಿನ್ನೆಲೆಯಲ್ಲಿ, ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕದಿರಯ್ಯನಪಾಳ್ಯ ಹಾಗೂ ಪಾಲಿಕೆ ವ್ಯಾಪ್ತಿಯ ಇತರೆ ಬಾಕಿ ಉಳಿದಿರುವ ಭೂಸ್ವಾಧೀನ ಸ್ವತ್ತುಗಳ ಮಾಲೀಕರಿಗೆ ತ್ವರಿತವಾಗಿ ಪರಿಹಾರ ಒದಗಿಸುವ ಉದ್ದೇಶದಿಂದ ಪ್ರಸಕ್ತ ಸಾಲಿನಲ್ಲಿ ಒಟ್ಟು 50 ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿರಿಸಲಾಗಿದೆ.

**ನಗರ ಯೋಜನೆ: ಯೋಜಿತ ನಗರವೇ ಸುಸ್ಥಿರ ಭವಿಷ್ಯದ ಆಧಾರ**

23. ನಗರದ ವ್ಯವಸ್ಥಿತ ಬೆಳವಣಿಗೆಯ ಹೊಣೆ ಹೊತ್ತಿರುವ ನಗರ ಯೋಜನೆ ವಿಭಾಗದಿಂದ ಅಭಿವೃದ್ಧಿ ಶುಲ್ಕ ರೂ.45 ಕೋಟಿ, ಕಟ್ಟಡ ನಕ್ಷೆ ಉಲ್ಲಂಘನೆ ದಂಡ ರೂ. 35 ಕೋಟಿ, ಕಟ್ಟಡ ಪರವಾನಗಿ ಶುಲ್ಕ ರೂ.60 ಕೋಟಿ ಹಾಗೂ ನೆಲ ಬಾಡಿಗೆ ರೂ.40 ಕೋಟಿ ಹಾಗೂ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸೇರಿ ಒಟ್ಟಾರೆ ರೂ. 209.75 ಕೋಟಿ ಆದಾಯ ನಿರೀಕ್ಷಿಸಲಾಗಿದೆ.

24. **ಪ್ರೀಮಿಯಂ ಎಫ್.ಎ.ಆರ್** ನೀತಿ ಜಾರಿಗೊಳಿಸಲಾಗಿದ್ದು, ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 18-B ಅಡಿಯಲ್ಲಿ ತಿದ್ದುಪಡಿ ತರಲಾಗಿದ್ದು, ರಸ್ತೆ ಅಗಲಕ್ಕೆ ಅನುಗುಣವಾಗಿ ಮೂಲ ಎಫ್.ಎ.ಆರ್ ಗಿಂತ ಶೇ.0.4 ರಷ್ಟು ಹೆಚ್ಚುವರಿ ಶುಲ್ಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ನಿಗಧಿತ ಶುಲ್ಕ ಪಾವತಿಸಿ ಈ ಸೌಲಭ್ಯ ಬಳಸಿಕೊಂಡು ಹೆಚ್ಚಿನ ವಿಸ್ತೀರ್ಣದ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಪಡೆಯಬಹುದು. ಇದರ ಮೂಲಕ ರೂ. 350 ಕೋಟಿ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದ್ದು, ನಗರದ ಸಮಗ್ರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುವುದು.

25. ಜಾಗತಿಕ ಕಾಸ್ಮೋಪಾಲಿಟನ್ ನಗರವಾಗಿ ಬೆಳೆದಿರುವ ಬೆಂಗಳೂರಿನ ಮುಂದಿನ 25 ವರ್ಷಗಳ ಸುಸ್ಥಿರ ಅಭಿವೃದ್ಧಿಗಾಗಿ, ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯಂತೆ ಹೊಸ **ಮಹಾಯೋಜನೆ**ಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ರೂಪಿಸುತ್ತಿದೆ. ಬಹುತೇಕ ಅಭಿವೃದ್ಧಿಗೊಂಡಿರುವ ಕೋರ್ ಬೆಂಗಳೂರು ಪ್ರದೇಶದ ಪುನರ್ ಅಭಿವೃದ್ಧಿಗೆ ಇದರಲ್ಲಿ ಒತ್ತು ನೀಡಲಾಗಿದೆ. ಮಹಾಯೋಜನೆ ತಯಾರಿಕೆಗೆ ಪ್ರಾಧಿಕಾರವು ಈಗಾಗಲೇ ಟೆಂಡರ್ ಪ್ರಕ್ರಿಯೆ ಆರಂಭಿಸಿದ್ದು, ಏಪ್ರಿಲ್‌ನಲ್ಲಿ ಕಾರ್ಯಾದೇಶ ನೀಡಿ 11 ತಿಂಗಳೊಳಗೆ ಕರಡು ಯೋಜನೆ ಸಿದ್ಧಪಡಿಸುವ ಗುರಿ ಹೊಂದಿದೆ. ಈ ಕಾರ್ಯಕ್ಕಾಗಿ ಪಾಲಿಕೆಯಿಂದ ರೂ.5 ಕೋಟಿ ಅನುದಾನ ಮೀಸಲಿಡಲಾಗಿದ್ದು, ಇದೇ ಯೋಜನೆಯ ಭಾಗವಾಗಿ ಚಾಮರಾಜಪೇಟೆ ವ್ಯಾಪ್ತಿಯ ಪಾದರಾಯನಪುರ ಮುಖ್ಯ ರಸ್ತೆಯನ್ನು 9 ಮೀಟರ್‌ನಿಂದ 24 ಮೀಟರ್‌ಗೆ ಅಗಲೀಕರಣಗೊಳಿಸುವ ಕಾಮಗಾರಿಯನ್ನೂ ಕೈಗೆತ್ತಿಕೊಳ್ಳಲಾಗುವುದು.

26. ನಗರದ ವಾಣಿಜ್ಯ ಮಹತ್ವವನ್ನು ಜಾಗತಿಕ ಮಟ್ಟಕ್ಕೆ ಏರಿಸಲು ಆಯ್ದ ರಸ್ತೆಗಳನ್ನು ಬಿಸಿನೆಸ್ ಕಾರಿಡಾರ್‌ಗಳಾಗಿ ಅಭಿವೃದ್ಧಿ ಪಡಿಸಲಾಗುವುದು. ಈ ಕಾರಿಡಾರ್‌ಗಳಲ್ಲಿ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಕಲ್ಪಿಸಿ, ಹೆಚ್ಚಿನ ಪ್ರೀಮಿಯಂ ಶುಲ್ಕವನ್ನು ಸಂಗ್ರಹಿಸಿ ನಗರದ ಸುಸ್ಥಿರ ಬೆಳವಣಿಗೆ ಮತ್ತು ಮೂಲಸೌಕರ್ಯ ವೃದ್ಧಿಗೆ ಮರು ಹೂಡಿಕೆ ಮಾಡುವ ಮೂಲಕ ಆರ್ಥಿಕ ಸದೃಢತೆಗೆ ಒತ್ತು ನೀಡಲಾಗುವುದು.

27. ಕರ್ನಾಟಕ ಸರ್ಕಾರವು 09-09-2025ರಂದು ಮಹತ್ವದ ಆದೇಶವನ್ನು ಹೊರಡಿಸಿದ್ದು, ಇದರನ್ವಯ 30x40 (1200 ಚದರಡಿ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗುವ 'ನೆಲ + 2 ಅಂತಸ್ತು' ಅಥವಾ 'ಸ್ಟಿಲ್ಟ್ (ಪಾರ್ಕಿಂಗ್) + 3 ಅಂತಸ್ತಿನ' ವಸತಿ ಕಟ್ಟಡಗಳಿಗೆ ಕಡ್ಡಾಯ ಸ್ವಾಧೀನಾನುಭವ ಪ್ರಮಾಣ ಪತ್ರ (OC) ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

28. **ನಂಬಿಕೆ ನಕ್ಷೆ ಯೋಜನೆಯಡಿ** 50x80 ಅಳತೆಯವರೆಗಿನ ನಿವೇಶನಗಳಲ್ಲಿ 4 ವಸತಿ ಘಟಕಗಳನ್ನು ನಿರ್ಮಿಸಲು ಖಾಸಗಿ ಆರ್ಕಿಟೆಕ್ಟ್ ಅಥವಾ ಇಂಜಿನಿಯರ್‌ಗಳ ಮೂಲಕವೇ ತಾತ್ಕಾಲಿಕ ಮಂಜೂರಾತಿ ಪಡೆಯಬಹುದು. ಆನ್‌ಲೈನ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ದಿನವೇ ಸ್ವಯಂ ಮಂಜೂರಾತಿ ದೊರೆಯುವ ಈ ವ್ಯವಸ್ಥೆಯು ನಕ್ಷೆ ಮಂಜೂರಾತಿ ಪ್ರಕ್ರಿಯೆಯನ್ನು ಅತ್ಯಂತ ಸರಳಗೊಳಿಸಿದೆ.

29. ಕಟ್ಟಡದ ನಡುಜಾಗಗಳನ್ನು ಸರಳೀಕರಣಗೊಳಿಸಿ ಕಟ್ಟಡದ ಸುತ್ತ ಬಿಡಬೇಕಾದ ನಡುಜಾಗದ (Setback) ನಿಯಮಗಳನ್ನು

ಸಡಿಲಗೊಳಿಸುವ ಮೂಲಕ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿದೆ. ರಸ್ತೆ ಅಗಲಕ್ಕೆ ಅನುಗುಣವಾಗಿ ಒಂದೇ ನಿವೇಶನದಲ್ಲಿ ಹೆಚ್ಚಿನ ಮನೆಗಳನ್ನು ನಿರ್ಮಿಸಲು ಅವಕಾಶ ನೀಡಲಾಗಿದ್ದು, ತಳ ಮಹಡಿಯ ನಿಯಮಗಳ ಸರಳೀಕರಣದಿಂದಾಗಿ ಕಡಿಮೆ ಜಾಗದಲ್ಲೂ ಒಂದು ಹೆಚ್ಚುವರಿ ಅಂತಸ್ತನ್ನು ನಿರ್ಮಿಸಲು ಸಾಧ್ಯವಾಗಲಿದೆ.

30. ಸ್ಟಿಲ್ಟ್ ಪಾರ್ಕಿಂಗ್ ನಿಯಮದಡಿ ರಸ್ತೆ ಬದಿಯ ವಾಹನ ನಿಲುಗಡೆ ಸಮಸ್ಯೆ ನಿವಾರಿಸಲು ಸ್ಟಿಲ್ಟ್ ಅಂತಸ್ತನ್ನು ಕಟ್ಟಡದ ಒಟ್ಟು ಎತ್ತರದ ಲೆಕ್ಕಾಚಾರದಿಂದ ಹೊರತುಪಡಿಸಿ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ. ಇದರಿಂದ ಪಾರ್ಕಿಂಗ್ ವ್ಯವಸ್ಥೆ ಸುಲಭವಾಗುವುದಲ್ಲದೆ, ಆನ್ ಸ್ಟ್ರೀಟ್ ಪಾರ್ಕಿಂಗ್ ತಡೆದು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಒಂದು ಹೆಚ್ಚುವರಿ ಅಂತಸ್ತು ನಿರ್ಮಿಸಲು ಅವಕಾಶ ನೀಡಲಾಗಿದೆ.

**ಹಣಕಾಸು ಮತ್ತು ಲೆಕ್ಕ ಶಾಖೆ: ಪಾರದರ್ಶಕ ಹಣಕಾಸು, ಶಕ್ತಿಶಾಲಿ ಆಡಳಿತ**

31. ನಗರದ ಸಮಗ್ರ ಅಭಿವೃದ್ಧಿಗೆ ಬಲವಾದ ಅಡಿಪಾಯವೆಂದರೆ ಸಮರ್ಥ ಹಣಕಾಸು ವ್ಯವಸ್ಥೆ. ಆದಾಯ ಸಂಗ್ರಹಣೆಯಿಂದ ಹಿಡಿದು ಖರ್ಚಿನ ನಿಯಂತ್ರಣದವರೆಗೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಆಧಾರವಾಗಿಟ್ಟುಕೊಂಡು ಹಣಕಾಸು ಮತ್ತು ಲೆಕ್ಕಪತ್ರ ಇಲಾಖೆ ಕಾರ್ಯನಿರ್ವಹಿಸುತ್ತಿದೆ. ಪಾಲಿಕೆಯ ಹಣಕಾಸು ವಿಭಾಗವು ತನ್ನೆಲ್ಲಾ ಪಾವತಿಗಳನ್ನು ಈಗಾಗಲೇ ಇಂಟಿಗ್ರೇಟೆಡ್ ಫೈನಾನ್ಸಿಯಲ್ ಮ್ಯಾನೇಜ್ಮೆಂಟ್ ಸಿಸ್ಟಮ್ (IFMS) ಮುಖಾಂತರವೇ ನಿರ್ವಹಿಸುತ್ತಿದೆ. ಪಾಲಿಕೆಯ ಎಲ್ಲಾ ಸ್ವೀಕೃತಿಗಳು, ಪಾವತಿಗಳು ಮತ್ತು ಅಂತರ ಕಚೇರಿ ನಿಧಿ

ವರ್ಗಾವಣೆಗಳು ಸೇರಿದಂತೆ ಪ್ರತಿಯೊಂದು ಹಣಕಾಸಿನ ವ್ಯವಹಾರವೂ ದೈನಂದಿನ ಆಧಾರದ ಮೇಲೆ ಇದರಲ್ಲಿ ವ್ಯವಸ್ಥಿತವಾಗಿ ದಾಖಲಾಗಲಿದೆ.

32. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವತಿಯಿಂದ ಹಮ್ಮಿಕೊಳ್ಳುವ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳನ್ನು ಪ್ರತ್ಯೇಕ ಅನುದಾನದಡಿ ನೇರ ನಗದು ವರ್ಗಾವಣೆ (DBT) ವ್ಯವಸ್ಥೆಯ ಮೂಲಕ ಫಲಾನುಭವಿಗಳಿಗೆ ತಲುಪಿಸಲಾಗುವುದು. ಹಾಗೂ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಯ (NDRF/SDRF) ನೆರವನ್ನು ತ್ವರಿತವಾಗಿ ವಿತರಿಸಲು ಪಾಲಿಕೆ ಆಯುಕ್ತರ ಹೆಸರಿನಲ್ಲಿ ಪ್ರತ್ಯೇಕ ವೈಯಕ್ತಿಕ ಠೇವಣಿ ಖಾತೆ (Personal Deposit Account) ತೆರೆಯಲಾಗುತ್ತಿದ್ದು, ಇದಕ್ಕಾಗಿ ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಕಾಯ್ದಿರಿಸಿ ತ್ವರಿತ ಪಾವತಿಗೆ ಕ್ರಮ ವಹಿಸಲಾಗಿದೆ.

33. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅವಧಿಯಿಂದ ಇತ್ಯರ್ಥವಾಗದೆ ಬಾಕಿ ಉಳಿದಿರುವ ಹಾಗೂ ಪ್ರಸ್ತುತ ಪಾಲಿಕೆಯಲ್ಲಿ ಉದ್ಭವಿಸುವ ಲೆಕ್ಕಪರಿಶೋಧನಾ ಕಂಡಿಕೆಗಳು ಹಾಗೂ ಮಹಾಲೇಖಪಾಲರು ಹಾಗೂ ಮುಖ್ಯ ಲೆಕ್ಕಪರಿಶೋಧಕರ ವರದಿಗಳಲ್ಲಿರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥಪಡಿಸುವ ಉದ್ದೇಶದಿಂದ ಪ್ರತ್ಯೇಕ ಲೆಕ್ಕಪರಿಶೋಧನಾ ಕೋಶವನ್ನು ಸೃಜಿಸಲಾಗಿದೆ.

34. ಪಾಲಿಕೆಯ ಸ್ವಂತ ಸಂಪನ್ಮೂಲಗಳ ಜೊತೆಗೆ, ಬೃಹತ್ ಮೂಲಸೌಕರ್ಯ ಯೋಜನೆಗಳ ಸಾಕಾರಕ್ಕೆ ರಾಜ್ಯ ಸರ್ಕಾರ

ನೀಡುತ್ತಿರುವ ಆರ್ಥಿಕ ಬೆಂಬಲ ಅತ್ಯಂತ ಅಮೂಲ್ಯವಾಗಿದೆ. ಈ ನಿರಂತರ ಪ್ರೋತ್ಸಾಹಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ನಾನು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. 2026-27ನೇ ಸಾಲಿನ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ 16ನೇ ಹಣಕಾಸು ಆಯೋಗದಡಿ ರೂ.112.25 ಕೋಟಿ ಹಾಗೂ ರಾಜ್ಯದ ಎಸ್.ಎಫ್.ಸಿ ಅನುದಾನದಡಿ ರೂ.90.97 ಕೋಟಿ ನಿರೀಕ್ಷಿಸಲಾಗಿದೆ. ಇದರ ಜೊತೆಗೆ, ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ರೂ.200 ಕೋಟಿ ಎಸ್.ಎಫ್.ಸಿ ವಿಶೇಷ ಅನುದಾನದಡಿ ರೂ.75 ಕೋಟಿ ಹಾಗೂ ವಿಶೇಷ ಮೂಲಭೂತ ಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ರೂ.375.61 ಕೋಟಿ ಅನುದಾನ ಲಭ್ಯವಾಗಲಿದ್ದು, ಈ ಎಲ್ಲಾ ನೆರವುಗಳು ನಮ್ಮ ಪಾಲಿಕೆಯ ಆದಾಯಕ್ಕೆ ಪೂರಕವಾಗಿ ನಗರದ ಭವಿಷ್ಯದ ಅಭಿವೃದ್ಧಿಗೆ ಬಲ ತುಂಬಲಿವೆ.

## ಸಾರ್ವಜನಿಕ ಕಾಮಗಾರಿಗಳು: ಸಮರ್ಪಕ ಕಾಮಗಾರಿಗಳು – ಸುಸ್ಥಿರ ಅಭಿವೃದ್ಧಿ

35. ನಮ್ಮ ಬೆಂಗಳೂರು ಕೇಂದ್ರ ಪಾಲಿಕೆಯ ವ್ಯಾಪ್ತಿಯಲ್ಲಿ 265 ಕಿಮೀ ಉದ್ದದ ಪ್ರಮುಖ (Arterial) ರಸ್ತೆಗಳು ಹಾಗೂ 1346 ಕಿಮೀ ಉದ್ದದ ವಾರ್ಡ್ ರಸ್ತೆಗಳ ಬೃಹತ್ ಜಾಲವಿದೆ. ಇವು ನಗರದ ಜೀವಾಳವಾಗಿದ್ದು, ರಾಜ್ಯ ಮತ್ತು ಪಾಲಿಕೆಯ ಅನುದಾನದಡಿ ಅಭಿವೃದ್ಧಿಪಡಿಸಲು ನಾವು ಬದ್ಧರಾಗಿದ್ದೇವೆ. ಡಾಂಬರೀಕರಣ, ಪಾದಚಾರಿ ಮಾರ್ಗ ನಿರ್ಮಾಣ ಹಾಗೂ ಪ್ರತಿಯೊಂದು ವಾರ್ಡ್ ರಸ್ತೆಯನ್ನು **'ಗುಂಡಿ ಮುಕ್ತ'** ಗೊಳಿಸುವುದು ನಮ್ಮ ಆದ್ಯತೆ.

36. ಪಾಲಿಕೆಯ ಸಾರ್ವಜನಿಕ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನಗಳು ಮತ್ತು ಮುನಿಸಿಪಲ್ ಬಾಂಡ್‌ಗಳ ಮೂಲಕ ಸಂಗ್ರಹಿಸಿದ ರೂ.200 ಕೋಟಿ ಸೇರಿದಂತೆ, ಒಟ್ಟಾರೆ ರೂ.1760 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.

37. ರಾಜ್ಯ ಸರ್ಕಾರವು **ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ** ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿಗೆ ರೂ.217.50 ಕೋಟಿ ಅನುದಾನ ನೀಡಿದ್ದು, 145 ಕಿಮೀ ಉದ್ದದ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಮೇ 2026ರೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. ಈ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

38. ವಾರ್ಡ್ ಮಟ್ಟದ ಮೂಲಸೌಕರ್ಯ ಬಲಪಡಿಸಲು **ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ** ರೂ.200 ಕೋಟಿ ಅನುದಾನ ಲಭ್ಯವಿದ್ದು, ಇದರ ಮೂಲಕ 115 ಕಿ.ಮೀ ವಾರ್ಡ್ ರಸ್ತೆಗಳ ಡಾಂಬರೀಕರಣ ಮತ್ತು 10 ಹೊಸ ಸಮುದಾಯ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು. ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿಯಲ್ಲಿ ಚಾಮರಾಜಪೇಟೆ, ಗಾಂಧಿನಗರ, ಶಿವಾಜಿನಗರ ವಿಧಾನಸಭಾ ಕ್ಷೇತ್ರಗಳಿಗೆ ತಲಾ ರೂ.25 ಕೋಟಿಗಳಂತೆ ಒಟ್ಟು ರೂ.75 ಕೋಟಿಗಳ ಅನುದಾನವನ್ನು ಒದಗಿಸಿದ್ದು, ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

39. ನಗರವನ್ನು ಪ್ರವಾಹ ಮುಕ್ತವಾಗಿಸಲು 69 ಕೋಟಿ ರೂಪಾಯಿ ವೆಚ್ಚದ 10.96 ಕಿ.ಮೀ ಬೃಹತ್ ನೀರುಗಾಲುವೆ ಅಭಿವೃದ್ಧಿ ಕಾಮಗಾರಿ ಅಂತಿಮ ಹಂತದಲ್ಲಿದ್ದು, 8.11 ಕಿ.ಮೀ ಈಗಾಗಲೇ ಪೂರ್ಣಗೊಂಡಿದೆ. ಇದರ ಮುಂದುವರಿದ ಭಾಗವಾಗಿ ವಿಶ್ವ ಬ್ಯಾಂಕ್ ನೆರವಿನ ಜಲಭದ್ರತೆ ಮತ್ತು ವಿಪತ್ತು ನಿರ್ವಹಣೆ ಕಾರ್ಯಕ್ರಮದಡಿ ರಾಜಕಾಲುವೆಗಳನ್ನು ಜಾಗತಿಕ ಮಟ್ಟಕ್ಕೆ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದು ಹವಾಮಾನ ವೈಪರೀತ್ಯದ ಸಂದರ್ಭದಲ್ಲೂ ನಗರದ ಸ್ಥಿರತೆಯನ್ನು ಕಾಪಾಡಲು ಸಹಕಾರಿಯಾಗಲಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಈ ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲಿವೆ.

40. ವಾರ್ಡ್‌ಗಳ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತಿ ವಾರ್ಡ್‌ಗೆ ತಲಾ ರೂ.2.25 ಕೋಟಿಯಂತೆ ಒಟ್ಟು ರೂ.141.75 ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಪ್ರತಿ ವಾರ್ಡ್‌ಗೆ ತಲಾ ರೂ.1.5 ಕೋಟಿಯಂತೆ, ಒಟ್ಟು ರೂ.94.5 ಕೋಟಿ ಮೀಸಲಿಡಲಾಗಿದೆ. ನಿರ್ವಹಣೆ ಕಾಮಗಾರಿಗಳಡಿ ರಸ್ತೆ ಗುಂಡಿ ಮುಚ್ಚಲು, ಚರಂಡಿ ಹೂಳೆತ್ತಲು ಪ್ರತೀ ವಾರ್ಡ್‌ಗೆ ರೂ.75 ಲಕ್ಷದಂತೆ ರೂ.47.25 ಕೋಟಿಗಳನ್ನು ಮೀಸಲಿಡಲಾಗಿದೆ.

41. **ಬ್ರಾಂಡ್ ಬೆಂಗಳೂರು-ವೈಬ್ರೆಂಟ್ ಬೆಂಗಳೂರು** ಅಡಿಯಲ್ಲಿ ರಸಲ್ ಮಾರುಕಟ್ಟೆಯನ್ನು ಪುನಶ್ಚೇತನಗೊಳಿಸಲು ರೂ.70 ಕೋಟಿಗಳನ್ನು, ಪಾಲಿಕೆಯ ಪ್ರಮುಖ ರಸ್ತೆಗಳಲ್ಲಿ ಅಲಂಕಾರಿಕ ವಿದ್ಯುದೀಕರಣಕ್ಕಾಗಿ ರೂ.15 ಕೋಟಿ ಆಯವ್ಯಯದಲ್ಲಿ ಮೀಸಲಿರಿಸಲಾಗಿದೆ.

42. ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ನಾವು **'ಸುರಕ್ಷಾ'** ಯೋಜನೆಯಡಿ 12 ಪ್ರಮುಖ ಜಂಕ್ಷನ್‌ಗಳನ್ನು ವೈಜ್ಞಾನಿಕವಾಗಿ ಮೇಲ್ದರ್ಜೆಗೇರಿಸಲಾಗುವುದು. ಪಾದಚಾರಿಗಳ ಹಿತಕ್ಕಾಗಿ **'ಹೆಜ್ಜೆ ಹೆಜ್ಜೆಗೆ ಸುರಕ್ಷೆ'** ಎಂಬ ವಿನೂತನ ಯೋಜನೆಯಡಿ 50 ಕಿ.ಮೀ. ಪಾದಚಾರಿ ಮಾರ್ಗಗಳ ಸುಧಾರಣೆ ಮತ್ತು 15 ಕಿ.ಮೀ. ಹೊಸ ಪಾದಚಾರಿ ಮಾರ್ಗಗಳ ನಿರ್ಮಾಣದ ಗುರಿ ಹೊಂದಲಾಗಿದ್ದು, ಇವು ವೃದ್ಧರು ಮತ್ತು ದಿವ್ಯಾಂಗ ಸ್ನೇಹಿಯಾಗಿ ಮಳೆ ನೀರು ಹೀರುವ ಆಧುನಿಕ ವಿನ್ಯಾಸದೊಂದಿಗೆ ರೂಪುಗೊಳ್ಳಲಿವೆ. ಈ ಎರಡೂ ಯೋಜನೆಗಳು ಹಾಗೂ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಹೈ-ರೈಸ್ ಕ್ರಾಸಿಂಗ್‌ಗಳನ್ನು (HRPC) ಅಳವಡಿಸಿ ಅಪಘಾತ ಮುಕ್ತ ಸಂಚಾರಕ್ಕೆ ಒತ್ತು ನೀಡಲು ಆಯವ್ಯಯದಲ್ಲಿ ಒಟ್ಟಾರೆಯಾಗಿ ರೂ.50 ಕೋಟಿ ಮೀಸಲಿರಿಸಲಾಗಿದೆ.

43. ಪಾದಚಾರಿಗಳ ಸುರಕ್ಷತೆಗಾಗಿ 24 ಪಾದಚಾರಿ ಮೇಲ್ಸೇತುವೆಗಳು ಕಾರ್ಯನಿರ್ವಹಿಸುತ್ತಿದ್ದು, ಸಂಚಾರ ಪೊಲೀಸರ ಮನವಿಯಂತೆ ಹೊಸದಾಗಿ 9 ಕಡೆ ಮೇಲ್ಸೇತುವೆಗಳ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಇದೇ ಮಾದರಿಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿ (PPP) ಹೊಸ ತಂಗುದಾಣಗಳನ್ನು ನಿರ್ಮಿಸಲಾಗುವುದು. ವಿಶೇಷವಾಗಿ, ಜಾಹೀರಾತು ಹಕ್ಕುಗಳ ಸಹಯೋಗದೊಂದಿಗೆ ನಗರದ ಅವಶ್ಯವಿರುವೆಡೆ ಸಾರ್ವಜನಿಕ ಉಚಿತ ಶೌಚಾಲಯಗಳನ್ನು ನಿರ್ಮಿಸಿ ನಿರ್ವಹಿಸಲು 2026-27ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

44. ನಗರದ ರಸ್ತೆಗಳ ಸಬಲೀಕರಣಕ್ಕಾಗಿ ಕೈಗೊಂಡ **ಮೈಕ್ರೋಸರ್ಫೇಸಿಂಗ್ ಯೋಜನೆ**ಯಡಿ ಈಗಾಗಲೇ 25 ಕಿಮೀ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ 5.50 ಕಿಮೀ ರಸ್ತೆಯ ಅಭಿವೃದ್ಧಿಯನ್ನು ಏಪ್ರಿಲ್ 2026ರೊಳಗೆ ಮುಕ್ತಾಯಗೊಳಿಸಲಾಗುವುದು. ಪ್ರಮುಖ ರಸ್ತೆಗಳ ದೀರ್ಘಾವಧಿ ಬಾಳಿಕೆಗಾಗಿ ವೈಟ್ ಟಾಪಿಂಗ್ ಕಾಮಗಾರಿಗಳಿಗೆ ವೇಗ ನೀಡಲಾಗಿದ್ದು, ಸುಮಾರು 30 ಕಿಮೀ ಉದ್ದದ ವೈಟ್ ಟಾಪಿಂಗ್ ಕಾಮಗಾರಿಯನ್ನು ಡಿಸೆಂಬರ್ 2026ರ ಅಂತ್ಯಕ್ಕೆ ಪೂರ್ಣಗೊಳ್ಳಲಿವೆ.

45. ರಸ್ತೆ ಗುಂಡಿಗಳನ್ನು ಸರ್ವಋತುವಿನಲ್ಲಿಯೂ ತ್ವರಿತವಾಗಿ ಮುಚ್ಚಲು 'ಜೆಟ್ ಪ್ಯಾಚರ್' ಯಂತ್ರ ಹಾಗೂ ತಂಪು ಡಾಂಬರು ತಂತ್ರಜ್ಞಾನವನ್ನು ಬಳಸಲು ನಿರ್ಧರಿಸಲಾಗಿದೆ. ಇದರೊಂದಿಗೆ, ಜನನಿಬಿಡ ರಸ್ತೆಗಳ ಸ್ವಚ್ಛತೆಗಾಗಿ ರಾತ್ರಿಯ ವೇಳೆ ಕಸ ಗುಡಿಸುವ 7 ಅತ್ಯಾಧುನಿಕ ಯಂತ್ರಗಳನ್ನು (Mechanical Sweeping Machine) 7 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲಾಗುತ್ತಿದೆ. ಈ ಯಶಸ್ವಿ ಮಾದರಿಯನ್ನು ಮುಂದಿನ ಸಾಲಿನಲ್ಲಿ ನಗರದ ಇತರೆ ಪ್ರಮುಖ ರಸ್ತೆಗಳಿಗೂ ವಿಸ್ತರಿಸಲು ಅಗತ್ಯ ಅನುದಾನ ಮೀಸಲಿಡಲಾಗಿದೆ.

46. ನಾಗರೀಕರಿಗೆ ಉತ್ತಮ ಸೇವೆ ಒದಗಿಸುವ ಮತ್ತು ನಗರದ ಮೂಲಸೌಕರ್ಯವನ್ನು ಉನ್ನತೀಕರಿಸುವ ಉದ್ದೇಶದೊಂದಿಗೆ ಪ್ರಮುಖ ಕಟ್ಟಡ ನಿರ್ಮಾಣ ಹಾಗೂ ನವೀಕರಣ ಯೋಜನೆಗಳಿಗೆ ರೂ. 60 ಕೋಟಿ ಮೀಸಲಿರಿಸಿದೆ.

- ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 117 ರಲ್ಲಿ ಶಾಲಾ ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು. ಇದರೊಂದಿಗೆ ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರದ ಜೀವನ್ ಭೀಮಾನಗರ ವ್ಯಾಪ್ತಿಯಲ್ಲಿ ಕಂದಾಯ ಅಧಿಕಾರಿಗಳ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಶ್ರೀ ಆರ್. ಗುಂಡೂರಾವ್ ಕ್ರೀಡಾಂಗಣ ಮತ್ತು ಶಿಶುವಿಹಾರ ನಿರ್ಮಾಣ ಹಾಗೂ ಜಿಮ್ ಕಟ್ಟಡಗಳ ನಿರ್ಮಾಣ ಕೈಗೊಳ್ಳಲಾಗುವುದು ಮತ್ತು ಶೇಷಾದ್ರಿಪುರಂನಲ್ಲಿರುವ ಈಜುಕೊಳದ ಉನ್ನತೀಕರಣ ಮಾಡಲಾಗುವುದು.
- ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಯಪುರಂನಲ್ಲಿರುವ ಪಾಲಿಕೆಯ ಬಾಲಕಿಯರ ಪ್ರೌಢ ಶಾಲೆ 2ನೇ ಹಂತದ ಅಭಿವೃದ್ಧಿ ಕಾಮಗಾರಿ, ಶಾಲಾ ಕಟ್ಟಡಗಳ ಮತ್ತು ಡಯಾಲಿಸಿಸ್ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ಹಾಗೂ ವಿವಿಧೋದ್ದೇಶ ಕಟ್ಟಡ ಹಾಗೂ ಸಮುದಾಯ ಭವನ ನಿರ್ಮಾಣ ಮಾಡಲಾಗುವುದು. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ದಯ್ಯ ರಸ್ತೆಯಲ್ಲಿ ಚಿಕ್ಕ ಮಕ್ಕಳ ಆಸ್ಪತ್ರೆ ನಿರ್ಮಾಣ ಕಾಮಗಾರಿ, ಜಯನಗರ 2ನೇ ಬ್ಲಾಕ್ ನಲ್ಲಿ ಕನಕನಾಯಕ ಭವನ ನಿರ್ಮಾಣ ಹಾಗೂ ಸಿದ್ದಯ್ಯ ರಸ್ತೆಯ ಚಿನ್ನಯ್ಯನಪಾಳ್ಯದಲ್ಲಿ ಮಾರುಕಟ್ಟೆ ಕಟ್ಟಡ ನಿರ್ಮಾಣ ಮಾಡಲಾಗುವುದು.

47. ಮೇಲ್ಸೇತುವೆಗಳ ಕೆಳಗಿನ ಪಾಳುಬಿದ್ದ ಜಾಗಗಳನ್ನು ಸುಂದರವಾದ ಮೈಕ್ರೋ ಪಾರ್ಕ್‌ಗಳು, ಸಣ್ಣ ವ್ಯಾಪಾರ ವಲಯಗಳು ಮತ್ತು

ಕಲಾತ್ಮಕ ತಾಣಗಳಾಗಿ ಪರಿವರ್ತಿಸುವ ಯೋಜನೆಯನ್ನು ಪಿಪಿಪಿ ಅಥವಾ ಸಿಎಸ್‌ಆರ್ ಸಹಯೋಗದಲ್ಲಿ ಕೈಗೆತ್ತಿಕೊಳ್ಳಲಾಗುವುದು.

48. **ಕಾರ್ಬನ್ ಕ್ರೆಡಿಟ್ ಯೋಜನೆಯಡಿ** ಜನದಟ್ಟಣೆ ಇರುವ, ಸಾವಿರಾರು ನೌಕರರು ಕೆಲಸ ಮಾಡುವ ಪ್ರದೇಶಗಳಲ್ಲಿ ಪೇ ಎಂಡ್ ಯೂಸ್ ಇವಿ ಚಾರ್ಜಿಂಗ್ ಪಾಯಿಂಟ್ಸ್, ಸೈಕಲ್ ಟ್ರ್ಯಾಕ್‌ಗಳ ನಿರ್ಮಾಣ, ಪಾದಚಾರಿಗಳಿಗೆ ಅನುಕೂಲಕರ ವಾಕ್ ವೇ ಮತ್ತು ಫುಟ್‌ಪಾತ್ ಅಭಿವೃದ್ಧಿ, ಸಾಮುದಾಯಿಕ ಸೌರಶಕ್ತಿ ಬಳಕೆಗೆ ಉತ್ತೇಜನ ನೀಡಿ ಸ್ವಚ್ಛ ಹಸಿರು ಮತ್ತು ಶಾಶ್ವತ ನಗರ ನಿರ್ಮಾಣ ನಮ್ಮ ನಗರ ಪಾಲಿಕೆಯ ಪ್ರಮುಖ ಗುರಿಯಾಗಿದೆ. ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಇವಿ ಚಾರ್ಜಿಂಗ್ ವ್ಯವಸ್ಥೆ ಅಳವಡಿಕೆ ಕಡ್ಡಾಯ ಮಾಡುವ ವ್ಯವಸ್ಥೆ ಜಾರಿಗೆ ತರಲಾಗುವುದು.

49. ಇಲ್ಲಿನ ರಸ್ತೆಗಳನ್ನು, ಸಾರ್ವಜನಿಕ ಸ್ಥಳಗಳನ್ನು ಮತ್ತು ಸಂಚಾರ ವ್ಯವಸ್ಥೆಯನ್ನು ಉನ್ನತೀಕರಿಸಲು ಪ್ರತ್ಯೇಕವಾಗಿ ಮೊದಲ ಬಾರಿಗೆ ನಗರ ಸಾರಿಗೆ ಯೋಜನೆ ತಜ್ಞ (Urban Transport Expert), ನಗರ ವಿನ್ಯಾಸಕರು (Urban Designer) ಮತ್ತು ನಗರ ಯೋಜಕರು (Urban Planner) ರನ್ನು ಒಳಗೊಂಡಂತೆ **“ನಗರ ವಿನ್ಯಾಸ ಕೋಶ”ವನ್ನು (Urban Design Cell)** ನ್ನು ಸೃಜಿಸಲಾಗಿದೆ. ಇದು ಬೆಂಗಳೂರಿನಲ್ಲಿ ನಗರ ಮೂಲಸೌಕರ್ಯವನ್ನು ಯೋಜಿಸುವ ಮತ್ತು ಜಾರಿಗೊಳಿಸುವ ವಿಧಾನದಲ್ಲಿ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ.

50. ಹವಾಮಾನ ಬದಲಾವಣೆಯ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಪಾಲಿಕೆಯ ಕಟ್ಟಡಗಳ Energy Audit

ಮಾಡಲು ಹಾಗೂ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಿ ಸ್ವಾವಲಂಭಿತ ವಿದ್ಯುತ್ ಬಳಕೆ ಆದ್ಯತೆ ನೀಡಲಾಗುವುದು ಮತ್ತು ಪಾಲಿಕೆ ಆಟದ ಮೈದಾನಗಳು, ಉದ್ಯಾನವನಗಳು ಮತ್ತು ಬಯಲು / ಖಾಲಿ ಜಾಗಗಳನ್ನು ಗುರುತಿಸಿ ಮಳೆ ನೀರು ಇಂಗುಗುಂಡಿಗಳನ್ನು ನಿರ್ಮಿಸಿ ಅಂತರ್ಜಲ ವೃದ್ಧಿಸುವುದಲ್ಲದೇ ಪ್ರವಾಹ ಪರಿಸ್ಥಿತಿ ತಡೆಗಟ್ಟಲು ಕ್ರಮವಹಿಸಲಾಗುವುದು. ಜೊತೆಗೆ ಆಯ್ದ ಕೆಲವು ರಸ್ತೆಗಳಲ್ಲಿ **ಬಯೋಸ್ವೇಲ್ಸ್** ಹಾಗೂ ಗಿಡಗಳನ್ನು ನೆಡುವುದರ ಮುಖೇನ **ಬ್ಲೂ – ಗ್ರೀನ್ ಕಾರಿಡಾರ್** ನಿರ್ಮಿಸಲು ಉದ್ದೇಶಿಸಲಾಗಿದ್ದು, ರೂ. 10.00 ಕೋಟಿಗಳ ಅನುದಾನ ಮೀಸಲಿಡಲಾಗಿದೆ.

51. ಎಲ್ಲಾ ವಾರ್ಡ್‌ಗಳಲ್ಲಿರುವ ಸಾಂಪ್ರದಾಯಿಕ ಬೀದಿದೀಪಗಳನ್ನು ಇಂಧನ ದಕ್ಷ ಎಲ್.ಇ.ಡಿ ದೀಪಗಳಿಗೆ ಪರಿವರ್ತಿಸಿ, ಕೇಂದ್ರಿಕೃತ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆಗೆ (CCMS) ಜೋಡಣೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈಗಾಗಲೇ 67,500 ಸಂಖ್ಯೆ ಸಾಂಪ್ರದಾಯಿಕ ಬೀದಿದೀಪಗಳಲ್ಲಿ ಒಟ್ಟು 51,037 ಬೀದಿದೀಪಗಳನ್ನು ಎಲ್.ಇ.ಡಿ ಗೆ ಪರಿವರ್ತಿಸಲಾಗಿದೆ. ಈ ಯೋಜನೆಯ ಅನುಷ್ಠಾನದ ನಂತರ ನಗರ ಪಾಲಿಕೆಯು ಬೆಸ್ಕಾಂ ಸಂಸ್ಥೆಗೆ ಪಾವತಿಸುವ ವಿದ್ಯುಚ್ಛಕ್ತಿ ಬಿಲ್ಲಿನಲ್ಲಿ ಸುಮಾರು ಶೇ 60% ರಷ್ಟು ಉಳಿತಾಯವಾಗಲಿದೆ.

**ನೈರ್ಮಲೀಕರಣ: ಸ್ವಚ್ಛ ಪರಿಸರ – ಸುಖಕರ ಜೀವನ**

52. ನಗರದ ಸ್ವಚ್ಛತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಪೌರಕಾರ್ಮಿಕರ ಕಲ್ಯಾಣಕ್ಕೆ ಪಾಲಿಕೆ ಮಹತ್ವ ನೀಡಿದೆ. ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ 2621 ಖಾಯಂ ಹಾಗೂ 843 ನೇರ ವೇತನದ

ನೌಕರರು ಸೇರಿದಂತೆ ಒಟ್ಟು 3464 ಪೌರಕಾರ್ಮಿಕರು ಶ್ರಮಿಸುತ್ತಿದ್ದಾರೆ. ಈ ಪೈಕಿ ಅರ್ಹರನ್ನು ನಿಯಮಾನುಸಾರ ಖಾಯಂಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನೌಕರರ ಹಾಜರಾತಿಗಾಗಿ Facial/Bio-metric ಸಾಧನಗಳನ್ನು ವಿತರಿಸಲಾಗಿದ್ದು, ಮುಂದಿನ ಹಂತದಲ್ಲಿ ಅಧಿಕೃತ ಗುರುತಿನ ಚೀಟಿ ಹಾಗೂ ಸಮಗ್ರ ಆರೋಗ್ಯ ವಿಮೆ ಸೌಲಭ್ಯವನ್ನು ತ್ವರಿತವಾಗಿ ಒದಗಿಸಲು ಕ್ರಮ ವಹಿಸಲಾಗುವುದು.

53. ನಗರದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ 2026-27ನೇ ಸಾಲಿನಲ್ಲಿ ಮುಖ್ಯ ರಸ್ತೆಗಳಿಗಾಗಿ Litter Picker Machines, Manually Push operated Machines ಗಳನ್ನು ಹಾಗೂ ಮಾರುಕಟ್ಟೆ ಪ್ರದೇಶಗಳಿಗಾಗಿ ಸಣ್ಣ ಗಾತ್ರದ ಯಾಂತ್ರೀಕೃತ ರಸ್ತೆ ಗುಡಿಸುವ ಯಂತ್ರಗಳನ್ನು ಖರೀದಿಸಲು ಯೋಜಿಸಲಾಗಿದೆ ಹಾಗೂ ನಗರದಲ್ಲಿ ಸ್ವಚ್ಛತೆ ಕಾಪಾಡಲು Mechanical Sweeping Machine ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು ರೂ.10 ಕೋಟಿಗಳನ್ನು ಮೀಸಲಿರಿಸಲಾಗಿದೆ.

54. ಮಹಿಳೆಯರ ಅನುಕೂಲಕ್ಕಾಗಿ ಸುಮಾರು 20 SHE TOILETS ಗಳನ್ನು ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿ ಪುರುಷರು, ಮಹಿಳೆಯರು ಮತ್ತು ಅಂಗವಿಕಲರಿಗೆ ಪ್ರತ್ಯೇಕ ವ್ಯವಸ್ಥೆಯುಳ್ಳ 60 ಹೊಸ ಶೌಚಾಲಯಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದ್ದು, ಶಿಥಿಲಾವಸ್ಥೆಯಲ್ಲಿರುವ ಹಳೆಯ ಶೌಚಾಲಯಗಳನ್ನು ಪಾಲಿಕೆ ದುರಸ್ಥಿಗೊಳಿಸಿ ಅಭಿವೃದ್ಧಿಪಡಿಸುತ್ತಿದೆ.

55. ಕಸ ಸಂಗ್ರಹಣೆ, ವಿಂಗಡಣೆ, ಭೂ ಭರ್ತಿ ಪ್ರದೇಶ ಅಭಿವೃದ್ಧಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣೆಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆಗೆ ರೂ.215.00 ಕೋಟಿಗಳ ಅನುದಾನ ಮೀಸಲಿರಿಸಿದೆ.

56. ನಮ್ಮ ನಗರವನ್ನು ಸ್ವಚ್ಛವಾಗಿಡುವ ಪೌರ ಕಾರ್ಮಿಕರಿಗೆ ಗೌರವಯುತ ಮತ್ತು ಆರೋಗ್ಯಕರ ಕೆಲಸದ ಪರಿಸರವನ್ನು ಒದಗಿಸಲು ಪ್ರತಿ ವಾರ್ಡ್‌ನಲ್ಲೂ ಸುಸಜ್ಜಿತ **'ಮಸ್ಟರಿಂಗ್ ಸೆಂಟರ್' (Mustering Center)** ಹಾಗೂ ವಿಶ್ರಾಂತಿಗಾಗಿ ಅಗತ್ಯ ಮೂಲಸೌಕರ್ಯಗಳನ್ನು ಒಳಗೊಂಡ **'ಸುವಿಧಾ ಕೇಂದ್ರ'**ಗಳು ಇರುವಂತೆ **(Suvidha Centers)** ಕ್ರಮವಹಿಸಲಾಗುವುದು.

## ಕೆರೆಗಳು: ನಗರದ ಜೀವ ಸೆಲೆಗಳು

57. ನಗರದ ನೈಸರ್ಗಿಕ ಸೌಂದರ್ಯದ ಪ್ರತಿಬಿಂಬ ಹಾಗೂ ಅಂತರ್ಜಲದ ಮೂಲವಾಗಿರುವ ಕೆರೆಗಳ ಪುನಶ್ಚೇತನಕ್ಕೆ ನಮ್ಮ ಪಾಲಿಕೆ ಸಂಪೂರ್ಣ ಬದ್ಧವಾಗಿದೆ. ಕಗ್ಗದಾಸಪುರ ಕೆರೆ, ಹಲಸೂರು ಕೆರೆ, ಕೆಳಗಿನ ಬೈರಸಂದ್ರ ಕೆರೆ ಹಾಗೂ ಚಿಕ್ಕಪೇಟೆ ಬೈರಸಂದ್ರ ಕೆರೆಗಳ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಈ ಕೆರೆಗಳ ಗಡಿಗಳನ್ನು ಒತ್ತುವರಿ ಮುಕ್ತಗೊಳಿಸಲು ತಂತಿ ಬೇಲಿ ನಿರ್ಮಿಸಲಾಗಿದ್ದು, ನಿರಂತರ ರಕ್ಷಣೆಗಾಗಿ ಗೃಹರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಒತ್ತುವರಿ ತೆರವುಗೊಳಿಸಿದ ಜಾಗಗಳಲ್ಲಿ ನೆಡುತೋಪುಗಳನ್ನು ನಿರ್ಮಿಸುವ ಮೂಲಕ ಪರಿಸರ ಸಮತೋಲನ ಮತ್ತು ಜೀವವೈವಿಧ್ಯತೆಯನ್ನು

ಕಾಯ್ದುಕೊಳ್ಳಲಾಗುತ್ತಿದ್ದು, ಈಗಾಗಲೇ ರೂ.43.14 ಕೋಟಿಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

58. ಪಾಲಿಕೆಯ ವಶದಲ್ಲಿರುವ ಕೆರೆಗಳಿಗೆ ಕೊಳಚೆ ನೀರು ಸೇರದಂತೆ ತಿರುವುಗಾಲುವೆ ನಿರ್ಮಾಣ, ಹೂಳೆತ್ತುವಿಕೆ ಹಾಗೂ ಬಲಿಷ್ಠ ಏರಿಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ. ಇದರೊಂದಿಗೆ Inlet ಮತ್ತು ಕೋಡಿ ನಿರ್ಮಾಣ, ಪಾದಾಚಾರಿ ಮಾರ್ಗ ಅಭಿವೃದ್ಧಿ, ಕಾವಲುಗಾರರ ಕೊಠಡಿ ಹಾಗೂ ಸಾರ್ವಜನಿಕ ಶೌಚಾಲಯಗಳಂತಹ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗಿದೆ. ಉದ್ಯಾನವನಗಳ ಸಮಗ್ರ ಅಭಿವೃದ್ಧಿಯೊಂದಿಗೆ ಕೆರೆಗಳನ್ನು ನಗರದ ಆಮ್ಲಜನಕದ ಕೇಂದ್ರಗಳನ್ನಾಗಿ ರೂಪಿಸಿ ನಾಗರಿಕರು ನಿರಾಳವಾಗಿ ಕಾಲ ಕಳೆಯಲು ಅನುಕೂಲವಾಗುವಂತೆ ಸುಂದರವಾದ ಮನರಂಜನಾ ತಾಣವಾಗಿ ಅಭಿವೃದ್ಧಿಪಡಿಸುವುದು ನಮ್ಮ ಉದ್ದೇಶವಾಗಿದೆ.

59. ವಿಶೇಷವಾಗಿ ಬೆಂಗಳೂರಿನ ಐತಿಹಾಸಿಕ ಹೆಗ್ಗುರುತಾದ ಹಲಸೂರು ಕೆರೆಯ ಸಮಗ್ರ ಅಭಿವೃದ್ಧಿಗಾಗಿ ಬ್ರಾಂಡ್ ಬೆಂಗಳೂರು ಯೋಜನೆ ಮತ್ತು ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ರೂ. 82 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ ರೂ. 33 ಕೋಟಿಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮುಂದಿನ ಹಂತದ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಈ ಯೋಜನೆಯಡಿ ಜಲಮೂಲ ಮತ್ತು ಜೌಗು ಪ್ರದೇಶಗಳ ಹೂಳೆತ್ತುವಿಕೆ, Gabion ವಿಧಾನವನ್ನು ಬಳಸಿ ಏರಿಗಳ ಬಲವರ್ಧನೆ ಹಾಗೂ ಸಾರ್ವಜನಿಕರ ಸಂಚಾರಕ್ಕೆ

ಅನುಕೂಲವಾಗುವಂತೆ ಎರಡು ಹಂತದ ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗುತ್ತಿದೆ. ಕೆರೆಯ ಸೌಂದರ್ಯೀಕರಣಕ್ಕಾಗಿ ಅಲಂಕಾರಿಕ ಗ್ರಿಲ್‌ಗಳನ್ನು ಅಳವಡಿಸುವುದರ ಜೊತೆಗೆ, ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಪ್ರತ್ಯೇಕ ಕಲ್ಯಾಣಿ ನಿರ್ಮಾಣದ ಮೂಲಕ ಹಲಸೂರು ಕೆರೆಯನ್ನು ಸುಸಜ್ಜಿತ ಪ್ರವಾಸಿ ಮತ್ತು ಸಾಂಸ್ಕೃತಿಕ ತಾಣವನ್ನಾಗಿ ರೂಪಿಸಲು ಪಾಲಿಕೆಯು ಶ್ರಮಿಸುತ್ತಿದ್ದು, ಈ ಸಾಲಿನಲ್ಲಿ ರೂ.20 ಕೋಟಿ ಅನುದಾನವನ್ನು ಒದಗಿಸಿದೆ.

## ಆರೋಗ್ಯ: ಆರೋಗ್ಯವೇ ಭಾಗ್ಯ, ಜನಜೀವನದ ಮಹಾಭಾಗ್ಯ

60. ಜಗಜ್ಯೋತಿ ಬಸವಣ್ಣನವರು ನುಡಿದಿರುವ ದೇಹವೇ ದೇಗುಲ ಜೀವವೇ ಜಂಗಮ ಎಂಬುದು ಜಗತ್ಪ್ರಸಿದ್ಧಿಯಾಗಿದೆ. ನಮ್ಮ ಪಾಲಿಕೆ ವ್ಯಾಪ್ತಿಯಲ್ಲಿರುವ 28 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 49 ನಮ್ಮ ಕ್ಲಿನಿಕ್ ಗಳು ಇಂದು ಬಡ ಮತ್ತು ಅಶಕ್ತ ವರ್ಗದವರ ಪಾಲಿಗೆ ಸಂಜೀವಿನಿಯಂತಿವೆ. ಇಲ್ಲಿ ಉಚಿತ ತಪಾಸಣೆ ಮತ್ತು ಔಷಧೋಪಚಾರದ ಜೊತೆಗೆ ತಾಯಿ ಮಕ್ಕಳ ಆರೈಕೆ ಹಾಗೂ ವಿವಿಧ ರೋಗಗಳ ನಿಯಂತ್ರಣಕ್ಕೆ ವಿಶೇಷ ಒತ್ತು ನೀಡಲಾಗುತ್ತಿದೆ.

61. ಗಾಂಧಿನಗರದ ಸುಸಜ್ಜಿತ ಡಯಾಲಿಸಿಸ್ ಕೇಂದ್ರ ಹಾಗೂ ಎಪಿಡಿ ಸಂಸ್ಥೆಯ ಸಹಯೋಗದ ಉಚಿತ ಫಿಸಿಯೋಥೆರಪಿ ಸೇವೆಗಳು ಸಹಸ್ರಾರು ಜನರ ಬದುಕಿಗೆ ಆಸರೆಯಾಗಿವೆ. ಮಕ್ಕಳ ಆರೋಗ್ಯವೇ ದೇಶದ ಸಂಪತ್ತು ಎಂಬ ಆಶಯದೊಂದಿಗೆ ಶಾಲೆ

ಕಾಲೇಜು ಮತ್ತು ಅಂಗನವಾಡಿಗಳಿಗೆ ನಮ್ಮ ವೈದ್ಯಕೀಯ ತಂಡಗಳು ಭೇಟಿ ನೀಡಿ ನಿಯಮಿತ ತಪಾಸಣೆ ನಡೆಸುತ್ತಿರುವುದು ಸದೃಢ ಬೆಂಗಳೂರಿನ ನಿರ್ಮಾಣಕ್ಕೆ ನಾವು ಹಾಕಿರುವ ಭದ್ರ ಬುನಾದಿಯಾಗಿದೆ.

62. ವೈದ್ಯಕೀಯ ಸೇವೆಗಳನ್ನು ಮತ್ತಷ್ಟು ಬಲಪಡಿಸಲು, ಪ್ರಸಕ್ತ ಸಾಲಿನಲ್ಲಿ 7 ಹೆರಿಗೆ ಆಸ್ಪತ್ರೆಗಳನ್ನು 30 ಹಾಸಿಗೆಯ ಸುಸಜ್ಜಿತ FRU ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಹಾಗೂ ಒಂದು ಆಸ್ಪತ್ರೆಯನ್ನು 50 ಹಾಸಿಗೆಯ FRU UCHC ಕೇಂದ್ರವನ್ನಾಗಿ IPHS ಮಾನದಂಡಗಳನ್ವಯ ಮೇಲ್ದರ್ಜೆಗೇರಿಸಲು ರೂ.40 ಕೋಟಿಗಳನ್ನು ಬ್ರಾಂಡ್ ಬೆಂಗಳೂರು - ಹೆಲ್ತಿ ಬೆಂಗಳೂರು ಯೋಜನೆಯಡಿ ಮೀಸಲಿರಿಸಿದೆ. ಈ ಆಸ್ಪತ್ರೆಗಳಲ್ಲಿ ಆಧುನಿಕ ಮಾಡ್ಯುಲರ್ ಶಸ್ತ್ರಚಿಕಿತ್ಸಾ ಕೊಠಡಿಗಳು, ಹೈಟೆಕ್ ಪ್ರಯೋಗಾಲಯಗಳು ಹಾಗೂ ತಜ್ಞ ವೈದ್ಯರ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ವಿಶೇಷವಾಗಿ, ಪೊಬ್ಬತ್ತಿ ಆಸ್ಪತ್ರೆಯಲ್ಲಿ ವಿಶೇಷ ಚೇತನ ಮಕ್ಕಳ ಸಮಗ್ರ ಬೆಳವಣಿಗೆ ಹಾಗೂ ಪುನರ್ವಸತಿಗಾಗಿ **'ವಾತ್ಸಲ್ಯ ಮನೆ'** ಎಂಬ ದಿನದ ಆರೈಕೆ ಕೇಂದ್ರವನ್ನು ಆರಂಭಿಸಲಾಗುವುದು. ಈ ಎಲ್ಲಾ ಕ್ರಮಗಳು ನಮ್ಮ ಬೆಂಗಳೂರನ್ನು ಆರೋಗ್ಯವಂತ ನಗರವನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಲಿವೆ.

63. ಆರ್ಥಿಕವಾಗಿ ಹಿಂದುಳಿದವರು ಮತ್ತು ಅಶಕ್ತರಿಗಾಗಿ **ರಕ್ಷಾ ಕೇಂದ್ರಗಳು ಹಾಗೂ ಆಶ್ರಯ ತಾಣಗಳನ್ನು** ಸ್ಥಾಪಿಸಲು ಯೋಜಿಸಲಾಗಿದೆ. ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಗುಣಮಟ್ಟದ ಚಿಕಿತ್ಸೆ ಮತ್ತು ಮಾನಸಿಕ ಆರೋಗ್ಯ

ಬೆಂಬಲ ನೀಡಲು ಬಜೆಟ್‌ನಲ್ಲಿ ಅನುದಾನ ಕಲ್ಪಿಸಲಾಗಿದೆ. ದಿನಗೂಲಿ ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಕೈಗೆಟಕುವ ದರದಲ್ಲಿ ಪೌಷ್ಟಿಕ ಊಟ ಒದಗಿಸುತ್ತಿರುವ 'ಇಂದಿರಾ ಕ್ಯಾಂಟೀನ್'ಗಳು ನಗರದ ಜೀವಾಳವಾಗಿದ್ದು, ರೂ. 5.00 ಕೋಟಿಗಳನ್ನು ಮೀಸಲಿರಿಸಿದೆ. ಇದು ಕೇವಲ ಆಹಾರ ಯೋಜನೆಯಾಗಿರದೆ ಎಲ್ಲರಿಗೂ ಗೌರವಯುತ ಬದುಕು ನೀಡುವ ಸಾಮಾಜಿಕ ನ್ಯಾಯದ ಪ್ರತೀಕವಾಗಿದೆ.

64. ಜೀವ ಉಳಿಸುವ 'ಸುವರ್ಣ ಘಳಿಗೆ'ಯ (Golden Hour) ಮಹತ್ವವನ್ನು ಅರಿತು, ಬೆಂಗಳೂರಿನ ಸಂಚಾರ ದಟ್ಟಣೆಯ ನಡುವೆಯೂ ತುರ್ತು ವೈದ್ಯಕೀಯ ನೆರವು ನೀಡಲು ನಾವು **'ಬೈಕ್ ಅಂಬ್ಯುಲೆನ್ಸ್-ಪ್ರಥಮ ಸ್ಪಂದನಾ ಘಟಕ'** (First Respond Unit) ಯೋಜನೆಯನ್ನು ಘೋಷಿಸುತ್ತಿದ್ದೇವೆ. ತುರ್ತು ಸಂದರ್ಭಗಳಲ್ಲಿ ಬೈಕ್ ಅಂಬ್ಯುಲೆನ್ಸ್‌ಗಳು ಶೀಘ್ರವಾಗಿ ತಲುಪಿ, ಜನರನ್ನು ಪ್ರಾಣಾಪಾಯದಿಂದ ಪಾರುಮಾಡಲಿವೆ. ಈ ಸೇವೆಯನ್ನು ಪ್ರಮುಖವಾಗಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (CSR) ನಿಧಿಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗುವುದು. ಸಾರ್ವಜನಿಕರಿಗೆ ಯಾವುದೇ ವೆಚ್ಚವಿಲ್ಲದೆ ತಕ್ಷಣದ ವೈದ್ಯಕೀಯ ಚಿಕಿತ್ಸೆ ಮತ್ತು ಸ್ಥಿರೀಕರಣ (Stabilization) ಒದಗಿಸುವುದು ಇದರ ಮೂಲ ಉದ್ದೇಶವಾಗಿದೆ.

65. **ಆರೋಗ್ಯ ಮಿತ್ರ ಯೋಜನೆ**ಯಡಿ ನಗರದ 22 ಸ್ಥಳಗಳಲ್ಲಿ ಸ್ಮಾರ್ಟ್ ವರ್ಚುವಲ್ ಕ್ಲಿನಿಕ್ (SVC) ಸ್ಥಾಪಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದ್ದು, ಇದರಲ್ಲಿ ಉಪಕರಣಗಳ ಪೂರೈಕೆಗೆ

ರೂ.8.90 ಕೋಟಿ, ಎರಡು ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ (O&M) ರೂ.5.07 ಕೋಟಿ ಹಾಗೂ ಕೇಂದ್ರಿತ ಮೇಲ್ವಿಚಾರಣೆಗಾಗಿ 15 ಕ್ಯಾಬಿನ್‌ಗಳ ಕಮ್ಯಾಂಡ್ ಸೆಂಟರ್ ನಿರ್ಮಾಣಕ್ಕೆ ರೂ.5.03 ಕೋಟಿ ವೆಚ್ಚವಾಗಲಿದ್ದು, ಒಟ್ಟಾರೆ ರೂ.19.00 ಕೋಟಿಗಳನ್ನು ಮೀಸಲಿರಿಸಿದೆ. ತಂತ್ರಜ್ಞಾನ ಆಧಾರಿತ ಈ ಕ್ಲಿನಿಕ್‌ಗಳು ತಜ್ಞ ವೈದ್ಯರ ದೂರಸ್ಥ ಸಲಹೆ ಮತ್ತು ಡಿಜಿಟಲ್ ಆರೋಗ್ಯ ದಾಖಲೆಗಳ ನಿರ್ವಹಣೆಯ ಮೂಲಕ ಸಾರ್ವಜನಿಕರಿಗೆ ಸುಲಭ ಹಾಗೂ ಗುಣಮಟ್ಟದ ಚಿಕಿತ್ಸೆ ಒದಗಿಸಲಿವೆ. ಇದು ವೈದ್ಯರ ಕೊರತೆಯನ್ನು ನೀಗಿಸುವುದಲ್ಲದೆ, ಬಡ ಮತ್ತು ಮಧ್ಯಮ ವರ್ಗದ ನಾಗರಿಕರಿಗೆ ಅವರ ಸಮೀಪದಲ್ಲೇ ಅತಿ ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಸೇವೆ ದೊರೆಯುವಂತೆ ಮಾಡಲಿದೆ.

66. ಆಹಾರ ಪ್ರೇಮಿಗಳ ಆರೋಗ್ಯ ರಕ್ಷಣೆಗಾಗಿ **ಕಿರುಮಳಿಗೆ - ಶುದ್ಧ ಆಹಾರ** ಎಂಬ ಪೈಲಟ್ ಯೋಜನೆಯನ್ನು ರೂ.25 ಲಕ್ಷ ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿದ್ದು, ಬೀದಿ ಬದಿ ವ್ಯಾಪಾರಿಗಳಿಗೆ ಎಫ್‌ಎಸ್‌ಎಸ್‌ಎಐ (FSSAI) ತರಬೇತಿ ಹಾಗೂ ಪ್ರಮಾಣಪತ್ರ ನೀಡುವುದರ ಜೊತೆಗೆ ಪ್ರತಿ ವಾರ್ಡ್‌ನಲ್ಲಿ ನಿಗದಿತ ಆಹಾರ ವಲಯಗಳನ್ನು ಗುರುತಿಸಿ ನಾಗರೀಕರಿಗೆ ಸುರಕ್ಷಿತ ಮತ್ತು ಗುಣಮಟ್ಟದ ಆಹಾರ ಲಭ್ಯವಾಗುವಂತೆ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

**ಪಶುಪಾಲನೆ: ಸಹಾನುಭೂತಿಯ ಸಂಕಲ್ಪ**

67. ಅಲ್ಲಮಪ್ರಭುಗಳು ಒಂದು ಮಾತು ಹೇಳುತ್ತಾರೆ ***“ಕಲ್ಲನಾದರು ಕರಗಿಸುವ ಕರುಣೆಯೇ ಭಕ್ತಿ”*** - ಕರುಣೆ ಮಾನವನಿಂದ

ಪ್ರಾಣಿಗಳಿಗೂ ವಿಸ್ತರಿಸಬೇಕು. ಅವುಗಳ ಬದುಕುವ ಹಕ್ಕನ್ನೂ ಗೌರವಿಸಬೇಕು. ಈ ನಿಟ್ಟಿನಲ್ಲಿ ನಮ್ಮ ನಗರದಲ್ಲಿ ಪ್ರಾಣಿ ಕಲ್ಯಾಣ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಸಮತೋಲನಗೊಳಿಸಲು ಪಶುಪಾಲನಾ ವಿಭಾಗದ ಮೂಲಕ ಕ್ರಾಂತಿಕಾರಿ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ರೂ.5.00 ಕೋಟಿಗಳನ್ನು ಮೀಸಲಿರಿಸಿದೆ.

68. ಮಾನ್ಯ ಸುಪ್ರೀಂ ಕೋರ್ಟ್ ಆದೇಶದಂತೆ, AWBI ಮಾರ್ಗಸೂಚಿ, ಹಾಗೂ PCA Act 1960 ಬೀದಿನಾಯಿಗಳ ಪುನರ್ವಸತಿಗಾಗಿ ರೂ.2.00 ಕೋಟಿ ವೆಚ್ಚದಲ್ಲಿ ವೈಜ್ಞಾನಿಕ ಆಶ್ರಯತಾಣಗಳು ವಿಶೇಷ ಸಂರಕ್ಷಣಾ ಕೇಂದ್ರಗಳನ್ನು (Rescue Centers) ಸ್ಥಾಪಿಸಲು ಯೋಜಿಸಲಾಗಿದೆ.

69. ಪಾಲಿಕೆಯ ವ್ಯಾಪ್ತಿಯಲ್ಲಿರುವ ಬಡ ಕುಟುಂಬಗಳ ಸಾಕುಪ್ರಾಣಿಗಳಿಗೆ ಮತ್ತು ಸಮುದಾಯದ ನಾಯಿಗಳಿಗೆ ಉಚಿತ ಹಾಗೂ ತ್ವರಿತ ಚಿಕಿತ್ಸೆ ನೀಡಲು ರೂ.50 ಲಕ್ಷ ವೆಚ್ಚದಲ್ಲಿ ಹೊಸ ಪಶು ಚಿಕಿತ್ಸಾಲಯಗಳನ್ನು ಆರಂಭಿಸಲಾಗುವುದು. ಪ್ರಾಣಿಗಳ ಅಂತ್ಯಸಂಸ್ಕಾರಕ್ಕೆ ಗೌರವಯುತ ವ್ಯವಸ್ಥೆ ಕಲ್ಪಿಸಲು ರೂ.1.00 ಕೋಟಿಗಳ ವೆಚ್ಚದಲ್ಲಿ ಪಾಲಿಕೆಯ ಸ್ವಂತ ವಿದ್ಯುತ್ ಚಿತಾಗಾರವನ್ನು ನಿರ್ಮಿಸಲು ಈ ಆಯವ್ಯಯದಲ್ಲಿ ಉದ್ದೇಶಿಸಲಾಗಿದೆ.

70. ಬೀದಿನಾಯಿಗಳ ಸಂಖ್ಯೆ ನಿಯಂತ್ರಿಸಲು ರೂ.1.44 ಕೋಟಿಗಳ ವೆಚ್ಚದಲ್ಲಿ ನಿರಂತರ ಸಂತಾನಹರಣ ಶಸ್ತ್ರಚಿಕಿತ್ಸೆ (ABC) ಹಾಗೂ ರೋಗ ನಿಯಂತ್ರಣಕ್ಕಾಗಿ ರೂ.80.94 ಲಕ್ಷ ವೆಚ್ಚದಲ್ಲಿ ಸಾಮೂಹಿಕ ಲಸಿಕೆ ನೀಡಲಾಗುವುದು. ದಂಡು ಪ್ರದೇಶದ ಎಬಿಸಿ ಕೇಂದ್ರದ ದುರಸ್ತಿಗೆ ರೂ.60 ಲಕ್ಷ ಮೀಸಲಿಡಲಾಗಿದೆ. ದೇಶದಲ್ಲೇ ಮೊದಲ

ಬಾರಿಗೆ 15,216 ಬೀದಿನಾಯಿಗಳಿಗೆ ಮಾರಕ ರೋಗಗಳ ವಿರುದ್ಧ ಸಂಯುಕ್ತ ಲಸಿಕೆ (Combined Vaccine) ನೀಡುವ ಯೋಜನೆಯನ್ನು ನಾವು ರೂಪಿಸಿದ್ದೇವೆ. ಅಲ್ಲದೆ, 30,432 ನಾಯಿಗಳಿಗೆ ರೂ.58.50 ಲಕ್ಷ ವೆಚ್ಚದಲ್ಲಿ ಮೈಕ್ರೋಚಿಪ್ ಅಳವಡಿಸುವ ಮೂಲಕ ಅವುಗಳ ವಾಸಸ್ಥಳ ಮತ್ತು ಲಸಿಕೆ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಲಾಗುವುದು.

**ತೋಟಗಾರಿಕೆ: ನಗರೋತ್ಥಾನದ ಅಂದಗಾರಿಕೆ**

**71.** ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯದಲ್ಲಿ ***"ಮಲೆಯ ನಾಡಿನ ಮಗನು ನಾನು, ಹಸಿರ ಸಿರಿಯ ಒಡೆಯ"*** - ಹಸಿರು ಎಂಥ ಸಿರಿ ಸಂಪತ್ತು ಎಂದು ಚಿತ್ರಿಸಿದ್ದಾರೆ. ಬೆಂಗಳೂರನ್ನು ಕಾಂಕ್ರೀಟ್ ಕಾಡಾಗಿ ಬೆಳೆಸುವ ಅನಿವಾರ್ಯತೆಯ ಜೊತೆಗೆ, ಹಸಿರು ನಾಡಾಗಿ ಉಳಿಸಿಕೊಳ್ಳುವ ಜವಾಬ್ದಾರಿಯೂ ನಮಗಿದೆ. ಹಾಗಾಗಿಯೇ ನಮ್ಮ ಪಾಲಿಕೆ ವ್ಯಾಪ್ತಿಯಲ್ಲಿರುವ 215ಕ್ಕೂ ಅಧಿಕ ಉದ್ಯಾನವನಗಳು ನಾಗರೀಕರಿಗೆ ಶುದ್ಧ ಗಾಳಿ ಮತ್ತು ಮನೋಲ್ಲಾಸ ನೀಡುವ ಪ್ರಮುಖ ಹಸಿರು ಕೇಂದ್ರಗಳಾಗಿವೆ. ಕಳೆದ ಸಾಲಿನಲ್ಲಿ ಇವುಗಳ ನಿರ್ವಹಣೆಗಾಗಿ ರೂ.13.83 ಕೋಟಿ ಹಾಗೂ ಅಭಿವೃದ್ಧಿಗಾಗಿ ರೂ.9.80 ಕೋಟಿಗಳನ್ನು ವಿನಿಯೋಗಿಸಲಾಗಿದ್ದು, ಹೆಚ್ಚಿನ ಕಾಮಗಾರಿಗಳು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಂಡಿವೆ.

**72.** ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ ಮತ್ತು ಶಿವಾಜಿನಗರ ಕ್ಷೇತ್ರಗಳಲ್ಲಿ 'ಬೆಂಗಳೂರು ಹಬ್ಬ' ಆಚರಿಸುವ ಮೂಲಕ ಸಾಂಸ್ಕೃತಿಕ ಕಳೆಯನ್ನು ಹೆಚ್ಚಿಸಲಾಗಿದೆ. ಅಂತರ್ಜಲ ವೃದ್ಧಿಗಾಗಿ 371 ಇಂಗು ಗುಂಡಿಗಳ ನಿರ್ಮಾಣ, ಪಾರದರ್ಶಕ ನಿರ್ವಹಣೆಗಾಗಿ 'ಹಸಿರು ಮಿತ್ರ' ಮೊಬೈಲ್ ಅಪ್ಲಿಕೇಶನ್ ಲೋಕಾರ್ಪಣೆ ಹಾಗೂ

ಪಾರ್ಕ್ ಕನ್ಸರ್ವೇಶನ್ ಪಾಲಿಸಿ ಅಡಿಯಲ್ಲಿ ಈಗಾಗಲೇ 14 ಸಂಸ್ಥೆಗಳಿಗೆ ಉದ್ಯಾನವನಗಳನ್ನು ದತ್ತು ನೀಡಿರುವುದು ನಮ್ಮ ಆಡಳಿತದ ಪರಿಸರ ಸ್ನೇಹಿ ಕಾಳಜಿಗೆ ಸಾಕ್ಷಿಯಾಗಿದೆ.

73. ಬೆಂಗಳೂರು ಕೇಂದ್ರ ನಗರದ ಈ ಹಸಿರು ಸಿರಿವಂತಿಕೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಮತ್ತು ನವೀನ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸುವ ಬದ್ಧತೆ ನಮ್ಮದಾಗಿದೆ. ಈ ನಿಟ್ಟಿನಲ್ಲಿ, 2026-27ನೇ ಸಾಲಿನ ಆಯವ್ಯಯದಲ್ಲಿ ಉದ್ಯಾನವನಗಳ ನಿರ್ವಹಣೆಗೆ ರೂ.19 ಕೋಟಿ ಹಾಗೂ ಸಮಗ್ರ ಅಭಿವೃದ್ಧಿ, ಮೇಲ್ದರ್ಜೆಗೇರಿಸುವಿಕೆ ಮತ್ತು ಆಧುನೀಕರಣಕ್ಕಾಗಿ ರೂ.15 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ. ಹಾಗೂ ಮಕ್ಕಳ ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆಗೆ ಪೂರಕವಾಗುವ **ಪುಟಾಣಿ ಪಾರ್ಕ್** ಅನ್ನು ಸಿಎಸ್‌ಆರ್ ಸಹಯೋಗದೊಂದಿಗೆ ನಿರ್ಮಿಸಲಾಗುವುದು.

74. ನಗರದ ಸೌಂದರ್ಯವನ್ನು ವೃದ್ಧಿಸುವ ನಿಟ್ಟಿನಲ್ಲಿ ಮೇಲ್ಸೇತುವೆಗಳ ಕೆಳಭಾಗಗಳನ್ನು ಸುಂದರಗೊಳಿಸಲು ಸಮಗ್ರ ಯೋಜನೆಯನ್ನು ರೂಪಿಸಲಾಗುತ್ತಿದ್ದು, ಪರಿಸರ ಸ್ನೇಹಿ ವಾತಾವರಣ ನಿರ್ಮಿಸಲು ರಸ್ತೆ ಮತ್ತು ಕೆರೆಗಳ ಸುತ್ತಲೂ ಬಿದಿರು ಸಸಿಗಳನ್ನು ನೆಡುವುದರ ಜೊತೆಗೆ Tree Park ನಿರ್ಮಾಣಕ್ಕೆ ವಿಶೇಷ ಒತ್ತು ನೀಡಲಾಗಿದೆ.

75. ನಾಗರಿಕರ ಮತ್ತು ಸಂಘ-ಸಂಸ್ಥೆಗಳ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸಲು ನಮ್ಮ ಬೆಂಗಳೂರು - ನಮ್ಮ ಯೋಜನೆ ಅಡಿಯಲ್ಲಿ ಉದ್ಯಾನವನ ಹಾಗೂ ರಸ್ತೆ ವಿಭಜಕಗಳನ್ನು ದತ್ತು ಪಡೆದು ಅಲಂಕಾರಿಕ ಗಿಡಗಳ ಮೂಲಕ ಸುಸ್ಥಿತಿಯಲ್ಲಿ ನಿರ್ವಹಿಸಲು

ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಉತ್ತೇಜನ ನೀಡುವ ಮೂಲಕ ಹಸಿರು ಮತ್ತು ಸುಂದರ ಬೆಂಗಳೂರು ನಿರ್ಮಾಣಕ್ಕೆ ಪಾಲಿಕೆಯು ದೃಢ ಹೆಜ್ಜೆ ಇರಿಸಿದೆ.

**ನಗರ ಅರಣ್ಯೀಕರಣ: ಕಾಂಕ್ರೀಟ್ ಕಾಡಿನ ಹಸಿರು ತೋರಣ**

76. ನಗರದ ಹಸಿರು ಹೊದಿಕೆಯನ್ನು ವಿಸ್ತರಿಸುವ ನಮ್ಮ ಬದ್ಧತೆಯ ಭಾಗವಾಗಿ ಕಳೆದ ಸಾಲಿನಲ್ಲಿ ಸಿ.ವಿ. ರಾಮನ್ ನಗರ ಮತ್ತು ಗಾಂಧಿನಗರ ವಲಯಗಳಲ್ಲಿ 4,000 ಸಸಿಗಳನ್ನು ನೆಡಲಾಗಿದೆ. 87,376 ಮರಗಳ ಗಣತಿ ಕಾರ್ಯವನ್ನು ಪೂರ್ಣಗೊಳಿಸಲಾಗಿದ್ದು, ಸಾರ್ವಜನಿಕ ಸುರಕ್ಷತೆಗಾಗಿ ಅಪಾಯಕಾರಿ ಮರಗಳ ನಿರ್ವಹಣೆಗೆ ಹಾಗೂ ವನ್ಯಜೀವಿ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದೆ.

77. 2026-27ನೇ ಸಾಲಿನಲ್ಲಿ ಮತ್ತಷ್ಟು ಬಲಪಡಿಸಲು ಟ್ರೀ ಕೆನೊಪಿ ಸಲುವಾಗಿ ರೂ.11.50 ಕೋಟಿ ಅನುದಾನವನ್ನು ಹಾಗೂ ರಸ್ತೆಬದಿ 50000 ಗಿಡಗಳನ್ನು ನೆಡುವುದಕ್ಕೆ ರೂ.3.5 ಕೋಟಿ ಮೀಸಲಿಡಲಾಗಿದೆ. ಸಾರ್ವಜನಿಕರಿಗೆ ಮತ್ತು ಪರಿಸರಾಸಕ್ತರಿಗೆ ವಿತರಿಸಲು ಸಸ್ಯಕ್ಷೇತ್ರದಲ್ಲಿ 25,000 ಸಸಿಗಳನ್ನು ಬೆಳೆಸಲು ಉದ್ದೇಶಿಸಲಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಬೆಳೆಸಿದ ಗಿಡಗಳ ಸುಸ್ಥಿತಿಯ ನಿರ್ವಹಣೆ ಹಾಗೂ ಬೃಹತ್ ಮರಗಳ ವೈಜ್ಞಾನಿಕ ಆರೈಕೆಗೆ ಪಾಲಿಕೆಯು ಕ್ರಮ ಕೈಗೊಳ್ಳಲಿದೆ. ಈ ಎಲ್ಲಾ ಯೋಜನೆಗಳ ಸಲುವಾಗಿ ರೂ.19.38 ಕೋಟಿಗಳನ್ನು ಮೀಸಲಿಡಲಾಗಿದೆ.

**ಸಮಾಜ ಕಲ್ಯಾಣ: ದೀನ-ದುರ್ಬಲರ ಉನ್ನತೀಕರಣ**

78. ಸಮಾಜ ಕಲ್ಯಾಣದ ಬಗ್ಗೆ ನಮ್ಮ ಆಶೋತ್ತರಗಳನ್ನು ಮಾತಾಡುವಾಗ ಹಿರಿಯರ ಹೇಳಿಕೆಯೊಂದು ನೆನಪಾಗುತ್ತದೆ. **ಒಡಲ ತುಂಬಿ ಊಟ ಮಾಡದವರಿಗೆ ಒಡಲ ತುಂಬಿ ಊಟ ನೀಡುವುದೇ ದಾಸೋಹ**. ಈ ನಿಟ್ಟಿನಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಸಬಲೀಕರಣವೇ ನಮ್ಮ ಪಾಲಿಕೆಯ ಮೂಲ ಆಶಯವಾಗಿದೆ. ಪೌರಕಾರ್ಮಿಕರಿಗೆ ರೂ.10.00 ಕೋಟಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ರೂ.17.00 ಕೋಟಿಗಳು, ಹಿಂದುಳಿದ ವರ್ಗದವರಿಗೆ ರೂ.5.50 ಕೋಟಿ, ವಿಶೇಷ ಚೇತನರಿಗೆ ರೂ.3.20 ಕೋಟಿಗಳು, ಒಟ್ಟಾರೆ ರೂ.35.70 ಕೋಟಿಗಳ ವೆಚ್ಚದಲ್ಲಿ 500 ಅರ್ಹ ಫಲಾನುಭವಿಗಳಿಗೆ ಒಂಟಿ ಮನೆಗಳನ್ನು ನಿರ್ಮಿಸಿಕೊಡಲಾಗುವುದು.

79. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹಕ್ಕಾಗಿ ರೂ.4.50 ಕೋಟಿಗಳ ಶಾಲಾ ಶುಲ್ಕ ಮರುಪಾವತಿ ಹಾಗೂ ಪೌರಕಾರ್ಮಿಕರು/ ಗ್ಯಾಂಗ್‌ಮನ್/ ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾಭ್ಯಾಸ ಉತ್ತೇಜನಕ್ಕಾಗಿ ರೂ.3.00 ಕೋಟಿಗಳ ವಿದ್ಯಾರ್ಥಿವೇತನ, ಹಾಗೂ ಪದವಿ ವಿದ್ಯಾರ್ಥಿಗಳಿಗೆ ರೂ.4.00 ಕೋಟಿಗಳ ವೆಚ್ಚದಲ್ಲಿ ಉಚಿತ ಲ್ಯಾಪ್ ಟಾಪ್ ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಇದರೊಂದಿಗೆ ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳ ಕಲ್ಯಾಣಕ್ಕಾಗಿ ರೂ.1.50 ಕೋಟಿಗಳು, ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಕ್ಕಾಗಿ ರೂ.90.00 ಲಕ್ಷಗಳನ್ನು ಮೀಸಲಿಡಲಾಗಿದೆ. ಪಾಲಿಕೆ ವ್ಯಾಪ್ತಿಯ 16 ನಿರಾಶ್ರಿತ ಕೇಂದ್ರಗಳ

ಉನ್ನತೀಕರಣಕ್ಕಾಗಿ ರೂ.1.80 ಕೋಟಿಗಳನ್ನು ಈ ಸಾಲಿನಲ್ಲಿ ವಿನಿಯೋಗಿಸಲಾಗುವುದು.

80. ನಾಗರಿಕರ ಆರ್ಥಿಕ ಸ್ವಾವಲಂಬನೆಗಾಗಿ ನಾವು ವಿಶೇಷ ಒತ್ತು ನೀಡುತ್ತಿದ್ದೇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವೃತ್ತಿನಿರತ ಮಹಿಳೆಯರು ಮತ್ತು ಪೌರಕಾರ್ಮಿಕರಿಗೆ **ಎಲೆಕ್ಟ್ರಿಕಲ್ ದ್ವಿಚಕ್ರ ವಾಹನ** ಹಾಗೂ **ಬೀದಿ ಬದಿ ವ್ಯಾಪಾರಿಗಳಿಗೆ** ರೂ.4.00 ಕೋಟಿಗಳ ವೆಚ್ಚದಲ್ಲಿ **ಇ-ವೆಂಡಿಂಗ್ ವಾಹನಗಳನ್ನು** ಒದಗಿಸಲಾಗುವುದು.

81. 'ಸಾರಥಿ' ಯೋಜನೆಯಡಿ 450 **ನಿರುದ್ಯೋಗಿ ಯುವಜನರಿಗೆ** ಆಟೋ ಮತ್ತು ಕಾರು ಖರೀದಿಸಲು ರೂ.4.50 ಕೋಟಿಗಳ ಸಹಾಯಧನ ನೀಡಲಾಗುವುದು. ವಿಶೇಷ ಚೇತನರಿಗೆ ರೂ.3.50 ಕೋಟಿಗಳ ವೆಚ್ಚದಲ್ಲಿ ತ್ರಿಚಕ್ರ ವಾಹನ ಮತ್ತು ಎಲೆಕ್ಟ್ರಿಕಲ್ ವೀಲ್ ಚೇರ್‌ಗಳನ್ನು ವಿತರಿಸಲಾಗುವುದು. ಮಹಿಳಾ ಸಬಲೀಕರಣಕ್ಕಾಗಿ ಹೊಲಿಗೆ ಯಂತ್ರ ಒದಗಿಸಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿ ಆಯೋಜಿಸಲು ರೂ.1.80 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ. ಪೌರಕಾರ್ಮಿಕರ ಮಕ್ಕಳ ಕಲಾ ಪ್ರತಿಭೆ ಗುರುತಿಸಲು ರೂ.1.00 ಕೋಟಿಗಳ ವೆಚ್ಚದಲ್ಲಿ ಸಂಗೀತ ಸಾಮಗ್ರಿಗಳನ್ನು ವಿತರಿಸಲಾಗುವುದು.

82. ಆಸರೆ ಇಲ್ಲದ ಹಿರಿಯ ನಾಗರೀಕರಿಗೆ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ ಸಹಯೋಗದೊಂದಿಗೆ ಉಚಿತ ಹಾಗೂ ಸುಸಜ್ಜಿತ ವಸತಿ ಸಮುಚ್ಚಯಗಳನ್ನು ನಿರ್ಮಿಸುವ **ಹಿರಿಯರ ವಾಡಿ** ಎಂಬ ಹೊಸ ಯೋಜನೆಯನ್ನು ರೂಪಿಸಲಾಗಿದೆ. ಇದಕ್ಕಾಗಿ ಪಾಲಿಕೆ

ಉಚಿತವಾಗಿ ಸ್ಥಳ ನೀಡಲಿದ್ದು, ಎನ್‌ಜಿಓಗಳು ಸಂಪೂರ್ಣವಾಗಿ ಇದರ ಜವಾಬ್ದಾರಿ ವಹಿಸಿಕೊಂಡು ಮುನ್ನಡೆಸುತ್ತಾರೆ.

**ಸಾರ್ವಜನಿಕ ಶಿಕ್ಷಣ: ಗುಣಮಟ್ಟದ ಭವಿಷ್ಯ ನಿರ್ಮಾಣ**

83. ವಿದ್ಯೆ ನಮ್ಮೆಲ್ಲ ಅಜ್ಞಾನ, ಅಸಹಾಯಕಥೆ, ಬಡತನ ಇತ್ಯಾದಿಗಳಿಗೆ ಮುಕ್ತಿ ಕೊಡುತ್ತದೆ ಎಂಬ ಮಾತು ತಲತಲಾಂತರದಿಂದ ಚಾಲ್ತಿಯಲ್ಲಿದೆ. ಪ್ರಸ್ತುತ ಪಾಲಿಕೆಯ ಅಡಿಯಲ್ಲಿ ಒಟ್ಟು 92 ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 50 ಶಿಶುವಿಹಾರಗಳು, 11 ಪ್ರಾಥಮಿಕ ಶಾಲೆಗಳು, 19 ಪ್ರೌಢಶಾಲೆಗಳು, 9 ಪದವಿಪೂರ್ವ ಕಾಲೇಜುಗಳು ಹಾಗೂ 3 ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳು ಸೇರಿವೆ. ಈ ಎಲ್ಲಾ ಸಂಸ್ಥೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡುತ್ತಿದ್ದು, ಅವರಿಗೆ ಗುಣಮಟ್ಟದ ಮೂಲಸೌಕರ್ಯ ಮತ್ತು ಉತ್ತಮ ಕಲಿಕಾ ವಾತಾವರಣವನ್ನು ಒದಗಿಸಲು ನಮ್ಮ ಆಡಳಿತ ಬದ್ಧವಾಗಿದೆ. ಪಾಲಿಕೆಯಲ್ಲಿನ ಸಾರ್ವಜನಿಕ ಶಿಕ್ಷಣಕ್ಕೆ ರೂ.6.85 ಕೋಟಿಗಳನ್ನು ಮೀಸಲಿರಿದೆ.

84. 2026-27ನೇ ಸಾಲಿನಲ್ಲಿ ಶಾಲಾ/ಕಾಲೇಜುಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕ, ನೋಟ್ ಬುಕ್, ಸಮವಸ್ತ್ರ, ಬ್ಯಾಗ್, ಶೂ-ಸಾಕ್ಸ್, ಸ್ವೆಟರ್‌ಗಳನ್ನು ವಿತರಿಸುವ ಸಲುವಾಗಿ ರೂ.4.50 ಕೋಟಿಗಳನ್ನು ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ.

85. ವಿದ್ಯಾರ್ಥಿಗಳ ಶೈಕ್ಷಣಿಕ ಫಲಿತಾಂಶವನ್ನು ಉತ್ತಮಪಡಿಸಲು ವಿಶೇಷವಾಗಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗಾಗಿ ದೈನಂದಿನ ತರಗತಿಗಳೊಂದಿಗೆ ಬೆಳಗ್ಗೆ ಮತ್ತು ಸಂಜೆ ವಿಶೇಷ ತರಬೇತಿ ತರಗತಿಗಳನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. ಆಧುನಿಕ ತಂತ್ರಜ್ಞಾನವನ್ನು ಶಿಕ್ಷಣದಲ್ಲಿ ಅಳವಡಿಸಲು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದ್ದು, ಡಿಸೆಂಬರ್ ತಿಂಗಳ ಒಳಗೇ ಪಠ್ಯಕ್ರಮವನ್ನು ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗೆ ಹೆಚ್ಚಿನ ಸಮಯಾವಕಾಶ ಕಲ್ಪಿಸಿಕೊಡಲಾಗಿದೆ.

86. ನಮ್ಮ ಪಾಲಿಕೆಯ ವಿದ್ಯಾರ್ಥಿಗಳ ಉದ್ಯೋಗ ಮತ್ತು ಉಜ್ವಲ ಭವಿಷ್ಯದ ದೃಷ್ಟಿಯಿಂದ, ಅವರಿಗೆ ಸೂಕ್ತ **'ವೃತ್ತಿ ಮಾರ್ಗದರ್ಶನ' (Career Guidance)** ಹಾಗೂ ವಿವಿಧ **'ಸ್ಪರ್ಧಾತ್ಮಕ ಪರೀಕ್ಷೆಗಳಿಗೆ'** ತಜ್ಞರಿಂದ ವಿಶೇಷ ತರಬೇತಿ ನೀಡುವ ನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

87. ನಮ್ಮ ಪಾಲಿಕೆಯ ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯ ವೃದ್ಧಿಸಲು ಕ್ರೀಡೆಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಬ್ಯಾಡ್ಮಿಂಟನ್, ಕರಾಟೆ, ಕ್ರಿಕೆಟ್ ಮತ್ತು ಈಜು ಕ್ರೀಡೆಗಳಲ್ಲಿ ಪ್ರತಿಷ್ಠಿತ ಸಂಸ್ಥೆಗಳಿಂದ ವೃತ್ತಿಪರ ತರಬೇತಿ ನೀಡಲಾಗುವುದು. ತರಬೇತಿಗೆ ಅಗತ್ಯವಾದ ಕ್ರೀಡಾ ಕಿಟ್‌ಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸುವ ಮೂಲಕ ಪ್ರತಿಭಾವಂತ ಕ್ರೀಡಾಪಟುಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದು.

88. "ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಕಲಾತ್ಮಕ ವಿಕಸನಕ್ಕಾಗಿ ಸಂಗೀತ ಹಾಗೂ ರಂಗಭೂಮಿ ಚಟುವಟಿಕೆಗಳಲ್ಲಿ ವಿಶೇಷ ತರಬೇತಿ ನೀಡುವುದರ ಜೊತೆಗೆ ಕಲಾ ಪರಿಕರಗಳನ್ನು ವಿತರಿಸಲಾಗುವುದು.

89. ಶೈಕ್ಷಣಿಕ ಮೂಲಸೌಕರ್ಯ ಬಲಪಡಿಸಲು ಪಾಲಿಕೆಯ ಶಾಲಾ-ಕಾಲೇಜುಗಳ ಗ್ರಂಥಾಲಯಗಳನ್ನು ಉನ್ನತೀಕರಿಸಲಾಗುವುದು ಹಾಗೂ ನೂತನವಾಗಿ ನಿರ್ಮಾಣವಾಗಿರುವ ಕಟ್ಟಡಗಳಲ್ಲಿ ಹೆಚ್ಚುವರಿ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

90. ಪಾಲಿಕೆಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಹೈಬ್ರಿಡ್ ಮಾದರಿಯಲ್ಲಿ ದೈಹಿಕ ಶಿಕ್ಷಣ, ಯೋಗ ಮತ್ತು ಮನೋವಿಕಾಸ ಕಾರ್ಯಕ್ರಮದ ಪೈಲಟ್ ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಯೋಜನೆಯಡಿ ಪ್ರಮಾಣಿತ ಶಿಕ್ಷಕರಿಂದ ವಾರಕ್ಕೊಮ್ಮೆ ದೈಹಿಕ ಶಿಕ್ಷಣ, ಯೋಗ, ಪ್ರಾಣಾಯಾಮ, ಧ್ಯಾನ ಹಾಗೂ ಇತರೆ ತರಗತಿಗಳನ್ನು ನಡೆಸಿ, ಪರೀಕ್ಷಾ ಒತ್ತಡ ನಿರ್ವಹಣೆ ಹಾಗೂ ಏಕಾಗ್ರತೆ ಹೆಚ್ಚಳಕ್ಕೆ ಒತ್ತು ನೀಡಲಾಗುವುದು. ಸಕ್ರಿಯವಾಗಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಪಾಲಿಕೆಯಿಂದ ಅಧಿಕೃತ ಪ್ರಮಾಣಪತ್ರ ನೀಡಲಾಗುವುದು.

91. ಪಾಲಿಕೆಯ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಶಿಕ್ಷಣದ ಭಾಗವಾಗಿ **ಕೃತಕ ಬುದ್ಧಿಮತ್ತೆ (ಎಐ)** ತರಬೇತಿ ನೀಡಲಾಗುವುದು. ಡಿಜಿಟಲ್ ಯುಗದಲ್ಲಿ ನಾಗರೀಕರನ್ನು ಸೈಬರ್

ವಂಚನೆ ಮತ್ತು ಆನ್‌ಲೈನ್ ಹಗರಣಗಳಿಂದ ರಕ್ಷಿಸಲು ಪಾಲಿಕೆ ವತಿಯಿಂದ **ಸೈಬರ್ ಕವಚ ಜಾಗೃತಿ** ಅಭಿಯಾನವನ್ನು ಕೈಗೊಂಡು ವಾರ್ಡ್ ಮಟ್ಟದಲ್ಲಿ ಕಾರ್ಯಾಗಾರಗಳನ್ನು ಆಯೋಜಿಸಿ ನಾಗರೀಕರ ಸುರಕ್ಷತೆಯನ್ನು ಬಲಪಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

***"ಬಾಳ್ವೆ ಒಂದು ಕಲೆ, ಬದುಕು ಒಂದು ಹಬ್ಬ, ಎಲ್ಲರ ಜೊತೆ ಬಾಳುವುದೇ ಅದರ ಗುಟ್ಟು"*** ಎಂಬ ಡಿ.ವಿ.ಜಿ ಅವರ ಅಮರ ನುಡಿಗಳೇ ಈ ಬಾರಿಯ ಆಯವ್ಯಯದ ಜೀವಾಳವಾಗಿದೆ. ಬೆಂಗಳೂರು ಕೇಂದ್ರ ನಗರದ ಸಮಗ್ರ ನವ ನಿರ್ಮಾಣ ನಮ್ಮ ಸಂಕಲ್ಪವಾಗಿದೆ. ಕೆಂಪೇಗೌಡರ ದೂರದೃಷ್ಟಿಯೊಂದಿಗೆ ಆಧುನಿಕತೆ ಮತ್ತು ಮಾನವೀಯ ಮೌಲ್ಯಗಳ ಸಮನ್ವಯದ ಮೂಲಕ ಈ ಐತಿಹಾಸಿಕ ನಗರವನ್ನು ಮರುನಿರ್ಮಿಸುವುದು ನಮ್ಮ ಗುರಿಯಾಗಿದೆ. ಅಭಿವೃದ್ಧಿಯು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕೆಂಬ ಆಶಯದೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಆಯವ್ಯಯದಲ್ಲಿ ಪ್ರಸ್ತಾಪಿಸಿರುವ ಪ್ರತಿಯೊಂದು ಯೋಜನೆಯು ನಮ್ಮ ಕೇಂದ್ರ ಬೆಂಗಳೂರನ್ನು ಸುಸ್ಥಿರ, ಪರಿಸರ ಸ್ನೇಹಿ ಹಾಗೂ ಮಾನವೀಯ ಮೌಲ್ಯಗಳನ್ನೊಳಗೊಂಡ 'ನಾಗರೀಕ-ಕೇಂದ್ರೀಕೃತ' ಆಧುನಿಕ ನಗರವನ್ನಾಗಿ ರೂಪಿಸಲಿದೆ ಎಂಬ ದೃಢ ವಿಶ್ವಾಸ ನನಗಿದೆ. ಬನ್ನಿ, ಈ ಭವ್ಯ ನಗರದ ಅಭಿವೃದ್ಧಿಯಲ್ಲಿ ನಾವೆಲ್ಲರೂ ಒಟ್ಟಾಗಿ ಕೈಜೋಡಿಸೋಣ.

# ಬೆಂಗಳೂರು ಕೇಂದ್ರ ನಗರ ಪಾಲಿಕೆ

## ಆಯವ್ಯಯ 2026-27

## ಆದಾಯಗಳು

| ಕ್ರ.ಸ. | ಆದಾಯದ ಮೂಲ | ಮೊತ್ತ ರೂ.ಲಕ್ಷಗಳಲ್ಲಿ | ಶೇಕಡ |
|---|---|---|---|
| 1 | ಆಸ್ತಿ ತೆರಿಗೆ , ಕರಗಳು ಮತ್ತು ತೆರಿಗೆಗೆ ಸಂಬಂಧಿಸಿದ ಆದಾಯ | 140680.00 | 41 |
| 2 | ತೆರಿಗೆಯೇತರ ಆದಾಯ | 47024.60 | 13 |
| 3 | ಭಾರತ ಸರ್ಕಾರದ ಅನುದಾನ | 14292.00 | 4 |
| 4 | ಕರ್ನಾಟಕ ಸರ್ಕಾರದ ರಾಜಸ್ವ ಅನುದಾನ | 9097.00 | 3 |
| 5 | ಕರ್ನಾಟಕ ಸರ್ಕಾರದ ಬಂಡವಾಳ ಅನುದಾನ | 65061.00 | 19 |
| 6 | ಸಾಲ ಪಡೆಯುವುದು (ಮುನಿಸಿಪಲ್ ಬಾಂಡ್‌ಗಳು | 20000.00 | 6 |
| 9 | ಅಸಾಧಾರಣ ಆದಾಯ | 46580.00 | 14 |
| | ಒಟ್ಟು ರೂ. | **342734.60** | **100** |



# ಬೆಂಗಳೂರು ಕೇಂದ್ರ ನಗರ ಪಾಲಿಕೆ
# ಆಯವ್ಯಯ 2026-27
# ವೆಚ್ಚಗಳು

| ಕ್ರ.ಸಂ | ವೆಚ್ಚಗಳ ವರ್ಗೀಕರಣ | ಮೊತ್ತ (ರೂ.ಲಕ್ಷಗಳಲ್ಲಿ) | ಶೇಕಡ |
|---|---|---|---|
| 1 | ಸಿಬ್ಬಂಧಿ ವೆಚ್ಚಗಳು | 36473.00 | 11 |
| 2 | ಆಡಳಿತ ವೆಚ್ಚಗಳು | 11088.95 | 3 |
| 3 | ಘನತ್ಯಾಜ್ಯ ನಿರ್ವಹಣೆ ವೆಚ್ಚಗಳು | 22500.00 | 7 |
| 4 | ಕಾರ್ಯಾಚರಣೆ & ನಿರ್ವಹಣೆ ವೆಚ್ಚಗಳು | 29745.00 | 9 |
| 5 | ಕಾರ್ಯಕ್ರಮಗಳ (ಆರೋಗ್ಯ ,ಶಿಕ್ಷಣ ಮತ್ತು ಕಲ್ಯಾಣ) ವೆಚ್ಚಗಳು | 17479.00 | 5 |
| 6 | ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳು | 214660.00 | 63 |
| 7 | ಠೇವಣಿ ಮತ್ತು ಕರಗಳ ಮರುಪಾವತಿ | 10710.00 | 3 |
| | ಒಟ್ಟು ರೂ. | **342655.95** | **100** |




## ಧನ್ಯವಾದಗಳು